ಜನಪದ ವಿಚಾರ


ವಾರ್ಷಿಕ ಚಂದಾ ೧೦೦-೦೦ ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಫೆಬ್ರವರಿ-೨೦೧೦ ಸಂಚಿಕೆ-೭



ಅಭಿವೃದ್ಧಿಯೆಂಬ ಗಾಣ, ರೈತನೆಂಬ ಕಬ್ಬು

ಜನಪದ ವಿಚಾರದಲ್ಲಿ

ಫೆಬ್ರವರಿ-೨೦೧೦

ಭಾರತ ದೇಶ ಹಳ್ಳಿಗಳ ದೇಶವೆಂದೂ, ರೈತ ದೇಶದ ಬೆನ್ನು ಮುಳೆಯೆಂದೂ ಶತಮಾನಗಳಿಂದ ಹೇಳಿಕೊಂಡು ಬರಲಾಗುತ್ತಿದೆ. ಆದರೆ ೨೧ನೇ ಶತಮಾನದಲ್ಲಿ ಈ ಮಾತನ್ನು ಸುಳ್ಳಾಗಿಸುವ ಗಂಭೀರ ಪ್ರಯತ್ನ ನಡೆದಿದೆ. ಈ ವಿಷಯವಾಗಿ ಹೃದಯಾಳದ ಕೆಲ ಮಾತುಗಳು ಈ ಲೇಖನದಲ್ಲಿವೆ.

ಅಭಿವೃದ್ಧಿಯನ್ನು ತಮ್ಮದೇ ಆದ ರೀತಿಯಲ್ಲಿ ಪ್ರಕಟಿಸಲು ಯತ್ನಿಸುವ ವಿವಿಧ ಅಭಿವೃದ್ಧಿಯ ಪರಿಕಲ್ಪನೆಗಳು ಮತ್ತು ಆ ಪರಿಕಲ್ಪನೆಗಳ ಮಿತಿ ಹಾಗೂ ಅದರ ಸುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು ಕುರಿತ ಲೇಖನ.

ಸ್ನಾನವೆಂದರೆ ಕೇವಲ ಶರೀರದ ಮೇಲೆ ನೀರು ಸುರಿದುಕೊಳ್ಳುವುದಲ್ಲ. ಆ ಕ್ರಿಯೆಗೆ ವಿಶಾಲವಾದ ಅರ್ಥವಿದೆ. ಅಂತೆಯೆ ದಿನಾಲು ನಾವು ನೋಡುವ ಚಂದ್ರ ನಮ್ಮೊಳಗಿನ ಮನಸ್ಸಿನ ಕನ್ನಡಿಯಾಗಿದೆ. ಈ ವಿಷಯವಾಗಿ ಲೇಖಕರು ತಮ್ಮ ಚಿಂತನೆಯನ್ನು ಹರಿಸಿದ್ದಾರೆ.

ಕನ್ನಡದ ಮತ್ತು ಕರ್ನಾಟಕದ ಹಿರಿಯ ಚಿಂತಕರಲ್ಲಿ ಯು.ಆರ್. ಅನಂತಮೂರ್ತಿ ಮತ್ತು ಹೆಗ್ಗೋಡಿನ ಸುಬ್ಬಣ್ಣ ಪ್ರಧಾನರು. ಓರ್ವ ಚಿಂತಕ ಇನ್ನೋರ್ವ ಚಿಂತಕನ ಬಗ್ಗೆ ಹೇಳಿರುವ ಮಾತುಗಳು. ಈ ಲೇಖನದ ವೈಶಿಷ್ಟ್ಯವಾಗಿದೆ.

ಪ್ರಸಿದ್ಧ ಮತ್ತು ಕ್ರಾಂತಿಕಾರಿ ನಾಯಕನೊಬ್ಬ ಪುಟ್ಟ ಗ್ರಾಮಕ್ಕೆ ಹೋದಾಗ ಅಲ್ಲಿಯ ಜನತೆಯಲ್ಲಿ ಉಂಟಾಗುವ ರೋಮಾಂಚನ ಈ ಲೇಖನದಲ್ಲಿ ಬಿಂಬಿತವಾಗಿದೆ.

ಗಾಂಧೀ ವಿಚಾರಗಳ ಪ್ರಸ್ತುತತೆಯ ಸಂದರ್ಭದಲ್ಲಿ ಆಡಳಿತರೂಢ ರಾಜಕಾರಣಿಗಳಲ್ಲಿ ಗಾಂಧೀ ಮತ್ತು ಅವರ ವಿಚಾರಗಳ ಬಗ್ಗೆ ಇರುವ ಅಜ್ಞಾನವನ್ನು ಚಿತ್ರಿಸುವ ವಿಡಂಬನಾತ್ಮಕ ಪ್ರಹಸನಗಳಿಂದ ಕೂಡಿದ ಲೇಖನ ಮಾಲೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೦
ಸಂಪುಟ - ೧೦
ಸಂಚಿಕೆ - ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

e-mail : janapada@yahoo.com
web: janapada.net

ನೇಗಿಲಯೋಗಿ

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ
ಫಲವನು ಬಯಸದೆ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿಯ ನಿಯಮದೊಳಗವನೇ ಭೋಗಿ

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ
ನೇಗಿಲ ಹಿಡಿದ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಿಗಳೆಸೆದರು, ಕವಿಗಳು ಬರೆದರು

ಯಾರೂ ಅರಿಯದ ನೇಗಿಲಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿ ಸುಖಕೆಳಸದೆ
ದುಡಿವನು ಗೌರವಕಾಶಿಸದೆ
ನೇಗಿಲ ಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೇ ನಿಂತಿದೆ ಧರ್ಮ

* * *

ಬರಿಯ ಉಳುವ ಕುಳದ ಗೆರೆಯೆ
ನಾಡ ಹಣೆಯ ಬರೆಹ ಬರೆವೆ!
ಹೊಲದ ಗಾಂಧಿ, ನೆಲದ ನಾಂದಿ,
ನೀನೆ ರಾಷ್ಟ್ರ ಶಕ್ತಿ:
ನೆಹರುಗೇನು ಕಡಮೆಯೇನು
ನಿನ್ನ ದೇಶಭಕ್ತಿ?
ಅವರು ಹೆಸರು; ನೀನೋ ಉಸಿರು
ನಾಡ ದೇವಿಗೆ:
ಆನಂದದೆಂದೂ ಕುಂದದಿರುವ
ನಂದಾದೀವಿಗೆ

– *ಕುವೆಂಪು*

ವಿಚಾರ ದೀಪ್ತಿ

ಅಮೇರಿಕಾದಲ್ಲಿಂದು ೬೦ ಲಕ್ಷ ಮಂದಿಗೆ ಆಹಾರದ ಚೀಟಿಗಳೇ ಜೀವನಾಧಾರ. ಅವರೆಲ್ಲಾ ನಿರುದ್ಯೋಗಿಗಳು. ಅವರಿಗೆ ಯಾವುದೇ ಕಲ್ಯಾಣ ಕಾರ್ಯಕ್ರಮವಿಲ್ಲ. ನಿರುದ್ಯೋಗ ವಿಮಾ ಸೌಲಭ್ಯವಿಲ್ಲ. ಪಿಂಚಣಿ ಇಲ್ಲ. ಮಕ್ಕಳ ಪಾಲನೆ ಭತ್ಯವಿಲ್ಲ. ಅಸಮರ್ಥ ಭತ್ಯೆಯೂ ಇಲ್ಲ.

ಆರ್ಥಿಕ ಕುಸಿತಕ್ಕೆ ಮೊದಲೇ ಈ ಪರಿಸ್ಥಿತಿ ನಿರ್ಮಾಣವಾಗತೊಡಗಿತ್ತು. ಕೆಲವು ಕಠಿಣ ಕಾರ್ಯಕ್ರಮಗಳಿಂದಾಗಿ ಬಡವರು ನಗದು ರೂಪದಲ್ಲಿ ಪರಿಹಾರ ಪಡೆಯುವುದು ಅಸಾಧ್ಯವಾಗತೊಡಗಿತ್ತು. ಕಳೆದ ಎರಡು ವರ್ಷಗಳಿಂದ ಆರ್ಥಿಕ ಕುಸಿತದಿಂದ ದೇಶ ತತ್ತರಿಸಿದೆ. ಇದರಿಂದಾಗಿ ಕಡು ಬಡತನಕ್ಕೆ ಜಾರಿದ ಜನರ ಸಂಖ್ಯೆ ಹೆಚ್ಚಿದೆ. ಅಮೇರಿಕಾದಲ್ಲಿ ಇಂದು ಪ್ರತಿ ೫೦ಮಂದಿಗೆ ಒಬ್ಬನ ಆದಾಯ ಎಂದರೆ ಆಹಾರ ಚೀಟಿ ಹೊರತು ಬೇರೇನೂ ಇಲ್ಲ. ಇಂತಹ ವಿಪರ್ಯಾಸಕ್ಕೆ ದ್ಯೋತಕ ಎಂಬಂತೆ ಕಾಣುತ್ತಾಳೆ ಇಸಾಬೆಲ್ ಬರ್ಮುಡೆಜ್.

ನಲವತ್ತೆರಡರ ಹರೆಯದ ಎರಡು ಮಕ್ಕಳ ತಾಯಿ ಒಂದ ಕಾಲಕ್ಕೆ ಆಗರ್ಭ ಶ್ರೀಮಂತೆ. ಹಲವು ಮಂದಿಗೆ ಉದ್ಯೋಗ ನೀಡಿದ್ದ ಗಲ್ಫ್ ಕೋಸ್ಟ್ ಹೋಮ್ಸ್‌ನ ಒಡತಿ. ಈಕೆ ಇಂದು ಒಂದು ಸಣ್ಣ ಉದ್ಯೋಗಕ್ಕಾಗಿ ಹಲ್ಲು ಗಿಂಜುತ್ತಾ ಅರ್ಜಿ ಗುಜರಾಯಿಸುತ್ತ ಕಚೇರಿಯಿಂದ ಕಚೇರಿಗೆ ಅಲೆದಾಡುತ್ತಿದ್ದಾಳೆ. ಕೆಲಸ ಸಿಗದೆ ಖಿನ್ನತೆಯಿಂದ ಮರುಗುತ್ತಾಳೆ. ಈಕೆಗೆ ಇಂದು ಒಂದು ಪೈಸೆ ಆದಾಯವೂ ಇಲ್ಲ. ಹೀಗಾಗಿ ಆಹಾರ ಚೀಟಿ ಪಡೆದುಕೊಂಡು ಹೊಟ್ಟೆ ತುಂಬಿಸಿ ಕೊಳ್ಳುತ್ತಿದ್ದಾಳೆ. ಬರ್ಮುಡೆಜ್‌ಳಂತಹ ಹಲವು ಮಂದಿ ಇಂದು ಅಮೇರಿಕಾದ ಬೀದಿಗಳಲ್ಲಿ ಕಾಣಸಿಗುತ್ತಾರೆ. ತಾತ್ಕಾಲಿಕ ಶೆಡ್ಡುಗಳಲ್ಲಿ ತಂಗಿರುವ ಅವರು ಸಿಗರೇಟುಗಳನ್ನು ಹಂಚಿಕೊಂಡು ಸೇದುತ್ತಿದ್ದಾರೆ. ಕೆಲವರು ತಮ್ಮ ಅರ್ಹತೆಗೆ ತೀರಾ ಕಡಿಮೆ ಎನಿಸುವ ಉದ್ಯೋಗ ಮಾಡುತ್ತಿದ್ದಾರೆ. ಕೆಲವರು ಬಂಧುಗಳ ಮನಗೆ ತೆರಳಿದ್ದಾರೆ. ಇನ್ನ ಕೆಲವರು ನಗದು ಹೊರತಾದ ರಿಯಾಯಿತಿ ದರದ ಅಪಾರ್ಟ್‌ಮೆಂಟ್‌ಗಳ ಸೌಲಭ್ಯ ಪಡೆದಿದ್ದಾರೆ. ಮನೆ, ಮಠ ಇದ್ದರೂ ಆದಾಯ ಇಲ್ಲದೆ ಸರ್ಕಾರ ಕೊಡುವ ಆಹಾರ ತಿಂದುಕೊಂಡು ಕರಾಳ ಭವಿಷ್ಯವನ್ನು ಎದರು ನೋಡುತ್ತಿದ್ದಾರೆ.

ಫ್ಲಾರಿಡಾದಲ್ಲಿ ಆಹಾರ ಚೀಟಿ ಹೊರತುಪಡಿಸಿ ಬೇರೇನೂ ಆದಾಯ ಇಲ್ಲದವರ ಸಂಖ್ಯೆ ಕಳೆದ ಎರಡು ವರ್ಷಗಳಲ್ಲಿ ದ್ವಿಗುಣಗೊಂಡಿದೆ. ಒಂದು ಕಾಲದಲ್ಲಿ ಸಂಪದ್ಭರಿತವಾಗಿದ್ದ ದೇಶದ ನೈರುತ್ಯ ಕರಾವಳಿ ಭಾಗದಲ್ಲಿ ಇಂತಹವರ ಸಂಖ್ಯೆ ಮೂರು ಪಟ್ಟು ಹೆಚ್ಚಿದೆ. ಮಿನ್ನೆಸೋಟ ಮತ್ತು ಉತಾ ಭಾಗದಲ್ಲಿ ಆದಾಯ ಇಲ್ಲದವರ ಸಂಖ್ಯೆ ಶೇ ೯೦ರಷ್ಟು ಹೆಚ್ಚಿದೆ. ಡೆಟ್ರಾಯಿಟ್ ಒಳಗೊಂಡ ವೇನ್ ಕೌಂಟಿಯಲ್ಲಿ ಪ್ರತಿ ೨೫ ನಿವಾಸಿಗಳಲ್ಲಿ ಒಬ್ಬ ಆಹಾರ ಚೀಟಿಗಳನ್ನು ಅವಲಂಬಿಸಿದ್ದಾನೆ. ಯಕಿಮ ಕೌಂಟಿಯಲ್ಲಿ ಪ್ರತಿ ೧೭ ನಿವಾಸಿಗಳಲ್ಲಿ ಒಬ್ಬ ಆಹಾರ ಚೀಟಿಗಳನ್ನು ನಂಬಿಕೊಂಡಿದ್ದಾನೆ.

(ಸಾಭಾರ : ನ್ಯೂಯಾರ್ಕ್ ಟೈಮ್ಸ್)

ಅಭಿವೃದ್ಧಿಯೆಂಬ ಗಾಣ, ರೈತನೆಂಬ ಕಬ್ಬು

- *ಸುರೇಂದ್ರ ಕೌಲಗಿ*

ರೈತ ಈ ಭೂಮಿಯ ಉಪ್ಪು

- ಗಾಂಧೀ

ಅಭಿವೃದ್ಧಿಯ ಶಂಖನಾದ ದಶದಿಕ್ಕುಗಳಲ್ಲೂ ಮೊಳಗುತ್ತಿರುವಾಗ ಅಭಿವೃದ್ಧಿಯೆಂಬ ಗಾಣಕ್ಕೆ ಸಿಕ್ಕಂತಾಗಿರುವ ರೈತನ ಆರ್ತನಾದ ಯಾರಿಗೆ ತಾನೆ ಕೇಳಿಸೀತು? ದಿನವೊಂದಕ್ಕೆ ಹೊಸ ಕಾರು, ಹೊಸ ದ್ವಿಚಕ್ರ, ಹೊಸ ವಿಮಾನ, ಹೊಸ ಯಂತ್ರ, ಹೊಸ ರಸ್ತೆ, ಹೊಸ ಮೇಲ್ಸಾರಿ, ಹೊಸ ಗಗನಚುಂಬಿ ಕಟ್ಟಡ, ಹೊಸ ಮೊಬೈಲ್, ಹೊಸ ದೂರದರ್ಶನ ಇತ್ಯಾದಿಗಳು ನುಗ್ಗುತ್ತಿರುವ ಸಮಯದಲ್ಲೇ ಪ್ರತಿ ಮೂವತ್ತು ನಿಮಿಷಕ್ಕೆ ಒಬ್ಬನಂತೆ ರೈತನ ಆತ್ಮಹತ್ಯ ನಡೆಯುತ್ತಿದೆ! ೧೯೯೭ ರಿಂದೀಚೆಗೆ ಎರಡು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ಎನ್.ಸಿ.ಆರ್.ಬಿ ವರದಿ ಮಾಡಿದೆ. ರೈತನ ಪರಿಸ್ಥಿತಿ ಇಷ್ಟು ಹೀನಾಯಮಾನವಾಗಿದ್ದರೂ ಸಮಾಜ ರೈತನ ಕಷ್ಟಕ್ಕೆ ಕಣ್ಣುಮುಚ್ಚಿಕೊಂಡು ಅವನ ಆರ್ತನಾದಕ್ಕೆ ಕಿವಿಮುಚ್ಚಿಕೊಂಡು ಕುಳಿತಿದೆಯಲ್ಲ ಇದಕ್ಕಿಂತ ದೇಶದ ಹೆಚ್ಚು ಅಧಃಪತನ ಇನ್ನಾವುದಿದೆ ಎಂದು ಯೋಚನೆ ಮಾಡುವ ಕಾಲ ಎಲ್ಲರ ಮುಂದೆ ಧುತ್ತನೆ ಬಂದು ನಿಂತಿದೆ. ಆದರೆ ದುರ್ದೈವವೆಂದರೆ ಅಭಿವೃದ್ಧಿ ಕುರಿತು ಧನಾತ್ಮಕವಾಗಿ, ರಚನಾತ್ಮಕವಾಗಿ, ಮಾನವೀಯವಾಗಿ ಆಲೋಚನೆ ಮಾಡಬೇಕಾದ ನೇತಾರರು, ಅರ್ಥಶಾಸ್ತ್ರಜ್ಞರು, ತಂತ್ರಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಅಧಿಕಾರಿಗಳು, ನೀತಿನಿರೂಪಕರು, ಶಿಕ್ಷಣ ತಜ್ಞರು ಇತ್ಯಾದಿಯಾಗಿ ಎಲ್ಲ ತಜ್ಞರೂ ಅಭಿವೃದ್ಧಿ ಎಂಬ ಮೋಹಿನಿಯ ಪ್ರೇಮಪಾಶಕ್ಕೆ ಸಿಕ್ಕಿಕೊಂಡಿದ್ದಾರೆ. ಪ್ರೇಮ ಕುರುಡು. ಅದಕ್ಕೆ ಮುಂದಿನ ಆಗು ಹೋಗುಗಳ ಬಗ್ಗೆ ಆಲೋಚನೆ ಇಲ್ಲ. ಕ್ಷಣಿಕ ಸುಖಕ್ಕಾಗಿ ಪ್ರೇಮ ಪೀಡಿತ ವ್ಯಕ್ತಿ ತನ್ನ ಉತ್ತಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಾನೆ. ಅಂಥದೇ ಪರಿಸ್ಥಿತಿ ಅಭಿವೃದ್ಧಿಯ ಮೋಹಪಾಶಕ್ಕೆ ಸಿಕ್ಕಿಕೊಂಡ ಇಂದಿನ ಒಟ್ಟು ಸಮಾಜದ್ದಾಗಿದೆ. ಆದ್ದರಿಂದ ಅಭಿವೃದ್ಧಿ ಪ್ರೇರಿತ ಕೈಗಾರಿಕಾ ಕ್ರಾಂತಿಯಾದಾಗಿನಿಂದಲೂ 'ಅಭಿವೃದ್ಧಿ'ಯ ನಿಖರವಾದ ವ್ಯಾಖ್ಯೆಯನ್ನು ರೂಪಿಸಲು ಸಾಧ್ಯವಾಗಿಲ್ಲ. ಜಗತ್ತಿನ ನೂರೆಂಟು ದೇಶಗಳೂ ತಮ್ಮತಮ್ಮದೇ ಆದ ವ್ಯಾಖ್ಯೆಗಳನ್ನು ರೂಪಿಸಿಕೊಂಡಿವೆ. ಆದ್ದರಿಂದ ಅಭಿವೃದ್ಧಿಯ ನೂರೆಂಟು ವ್ಯಾಖ್ಯೆಗಳು. ಹಾಗಾಗಿ ಒಂದು ದೇಶದ ಅಭಿವೃದ್ಧಿ ಇನ್ನೊಂದು ದೇಶದ ಅಭಿವೃದ್ಧಿಗೆ ಡಿಕ್ಕಿ ಹೊಡೆಯುತ್ತದೆ. ಪರಿಣಾಮ ಘರ್ಷಣೆ ಮತ್ತು ಯುದ್ಧ. ಯುದ್ಧದಲ್ಲಿ ಬಲವಿದ್ದ ದೇಶಕ್ಕೆ ಜಯ. ದೊಡ್ಡ ಮೀನು ಸಣ್ಣ ಮೀನನ್ನು ತಿಂದು ಬದುಕುವಂತೆ. ಪರಿಣಾಮ ಬಂಡವಾಳಶಾಹಿ, ಸೈನ್ಯಶಾಹಿ, ಶಸ್ತ್ರಶಾಹಿ ಆಧಾರಿತವಾದ ಸಾಮ್ರಾಜ್ಯಶಾಹಿ. ದೊಡ್ಡಣ್ಣನ ಪ್ರಭುತ್ವ. ಈ ಎಲ್ಲ ಪ್ರಕಾರದ ಶಾಹಿಗಳಿಗೆ ಬೆನ್ನಾಗಿ ನಿಂತಿರುವ ರೈತ. ಆದರೆ ಆ ರೈತನ ಹೊಟ್ಟೆ ಬರಿದೊ ಬರಿದು, ತೆರೆವೊ ತೆರವು, ಅವನೇನಾದರೂ ಜೋರಾಗಿ ಕೂಗಿದರೆ ಅವನ ಮುಂದೆ ಅಭಿವೃದ್ಧಿಯ ಸುಂದರ ಸೇಬನ್ನು ಹಿಡಿಯಲಾಗುವುದು!

ಅವನು ಅದನ್ನು ಹಿಡಿಯಲು ಮುಂದೆ ಹೋದರೆ ಅದು ಇನ್ನಷ್ಟು ದೂರ ಕೈಗೆಟುಕದಂತೆ ಉರುಳಿ ಹೋಗುವುದು. ಅಭಿವೃದ್ಧಿಯ ಆ ಸೇಬು ಸದಾ ಕೈಜಾರಿ ಹೋಗುತ್ತಲೇ ಇರುವುದು. ಒಂದರ್ಥದಲ್ಲಿ ಜಾರಿಕೊಂಡು ಹೋಗುವುದೇ ಅಭಿವೃದ್ಧಿಯ ತಂತ್ರಗಾರಿಕೆ. ರೈತನಿಗೆ ಅಗತ್ಯವಾದ ಭೂಮಿಯನ್ನು ಅವನಿಗೆ ಕೊಡಲಾಗದಿದ್ದರೆ, ಅವನಿಗೆ ವಿದೇಶಿ ಮೂಲದ ಹಸು ಕೊಟ್ಟು ನಿನ್ನ ಅಭಿವೃದ್ಧಿ ಮಾಡಿಕೊ ಎಂದು ಹೇಳುವುದು; ನಿನ್ನ ಮಕ್ಕಳಿಗೆ ಊಟ ಹಾಕಲು ನೀನು ಅಸಮರ್ಥನಾದರೆ ಅವರನ್ನು ಶಾಲಗೆ ಕಳುಹಿಸುವುದರ ಮೂಲಕ ಬಿಸಿ ಊಟದ ಪ್ರಯೋಜನ ಪಡೆದುಕೊ ಎಂದು ಹೇಳುವುದು; ನಿನ್ನ ಮಕ್ಕಳಿಗೆ ನಿನ್ನ ಹಳ್ಳಿಯಲ್ಲಿ ಉದ್ಯೋಗ ಕೊಡಲಾಗದಿದ್ದರೆ ಅವರಿಗೆ ಇಂಗ್ಲಿಷ್ ಶಿಕ್ಷಣ ಕೊಡುವುದರ ಮೂಲಕ ಅವರನ್ನು ಅರೆಬೆಂದ ಶಿಕ್ಷಿತರನ್ನಾಗಿ ಮಾಡಿ ಬೆಂಗಳೂರಿಗೊ, ಮುಂಬೈಗೊ ಕಳುಹಿಸು ಎಂದು ಹೇಳುವುದು; ನೀನು ಕೃಷಿ ಆಧಾರಿತ ಸ್ವತಂತ್ರ ಜೀವನ ನಡೆಸಲು ಅಸಮರ್ಥನಾದರೆ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ಸೇರಿಕೊಂಡು ಜೆ.ಸಿ.ಬಿ ಯಂತ್ರದೊಂದಿಗೆ ನೀನೊಂದು ಯಂತ್ರವಾಗಿ ಕೆಲಸಮಾಡೆಂದು ಹೇಳುವುದು; ವಿಮಾನ ನಿಲ್ದಾಣಕ್ಕೊ, ಚತುಷ್ಪಥ ರಸ್ತೆ ನಿರ್ಮಾಣಕ್ಕೊ, ಅಣೆಕಟ್ಟು ಕಟ್ಟಲು ರೈತನ ಭೂಮಿಯನ್ನು ಆಕರ್ಷಕ ಪರಿಹಾರದೊಂದಿಗೆ ತೆಗೆದುಕೊಂಡು ಅವನನ್ನು 'ಮಾತೃಭೂಮಿ' ಹಳ್ಳಿಯಿಂದ ಉಚ್ಚಾಟಿಸಿ ನಗರಕ್ಕೆ ಹೋಗಿ ಅಲ್ಲಿಯ ವಿಶೇಷ ಆರ್ಥಿಕ ವಲಯದಲ್ಲಿ 'ದೊಡ್ಡಸ್ತಿಕೆ'ಯ ಕೆಲಸ ಪಡೆ ಎಂದು ಹೇಳುವುದು ಇತ್ಯಾದಿಗಳೆಲ್ಲಾ ಸೇಬಿನ ಅರ್ಥದ ಅಭಿವೃದ್ಧಿಯ ತಂತ್ರಗಾರಿಕೆಯೇ ಆಗಿದೆ. ಬಡಪಾಯಿ ರೈತ ಅಭಿವೃದ್ಧಿಯ ಈ ತಂತ್ರಗಾರಿಕೆಯನ್ನು ತಿಳಿಯದವನಾಗಿದ್ದಾನೆ. ಆ ಕಾರಣದಿಂದ ಅವನು ತನಗೆ ಅರಿವಿಲ್ಲದಂತೆಯೇ ಅಭಿವೃದ್ಧಿ ಎಂಬ ಗಾಣಕ್ಕೆ ಸಿಕ್ಕ ಕಬ್ಬಿನಂತಾಗಿದ್ದಾನೆ; ದೀಪದ ಬೆಳಕಿಗೆ ಮರುಳಾಗಿ ಆತ್ಮಹತ್ಯೆ ಮಾಡಿಕೊಳ್ಳುವ ದೀಪದ ಹುಳುವಿನಂತಾಗಿದ್ದಾನೆ.

ಪಾಶ್ಚಿಮಾತ್ಯ ದೇಶಗಳ ವ್ಯಾಪಾರದ ಕಾರಣದಿಂದಾಗಿ, ವಾಯುವ್ಯ ದೇಶಗಳ ದಾಳಿಗಳಿಂದಾಗಿ ಬೃಹತ್ ಭಾರತದೇಶ ಇನ್ನೂರು ಮುನ್ನೂರು ವರ್ಷಗಳ ಕಾಲ ಪ್ರಾಚೀನತೆಯ ಅಜ್ಞಾನವೆಂಬ ಆ ಕಾಲದಲ್ಲಿ ಗಾಣಕ್ಕೆ ಸಿಕ್ಕ ಕಬ್ಬಾಗಿ ನಿರ್ವೀರ್ಯ, ಹತಾಶ, ದಾಸ ಮನೋವೃತ್ತಿಯ ದೇಶವಾಗಿದ್ದಂತೆ ಈಗ ಸ್ವದೇಶಿ ಸರ್ಕಾರದ, ತನ್ನದೇ ಮತದಿಂದ ಆಯ್ಕೆಗೊಂಡ ಅಧಿಕಾರದ ಸ್ಥಾನದಲ್ಲಿರುವ ಪ್ರತಿನಿಧಿಗಳ, ತನ್ನ ದುಡಿಮೆಯ ಫಲವಾಗಿ ಬಂದ ರಾಷ್ಟ್ರೀಯ ಆದಾಯದಲ್ಲಿ ವೇತನ ಪಡೆಯುವ ಅಧಿಕಾರಿಗಳ ಇವರ ಆಧುನಿಕ ಕಾಲದ ಆಳ್ವಿಕೆಯಲ್ಲಿ ರೈತ ತತ್ತರಿಸಿ ಹೋಗಿದ್ದಾನೆ; ಅವನ ಮಾತೃಭೂಮಿ ಹಳ್ಳಿಗಳು ನೆಲಕಚ್ಚಿವೆ. ರಾಷ್ಟ್ರಪಿತ ಗಾಂಧೀಯವರ ಕನಸಿನ ಮೇರೆಗೆ ದೇಶದ ಏಳು ಲಕ್ಷ ಹಳ್ಳಿಗಳೆಲ್ಲವೂ ತಮ್ಮ ಜೀವನಾವಶ್ಯಕ ವಸ್ತುಗಳಿಗಾಗಿ ತಮ್ಮ ನೆರೆಹೊರೆಯವರನ್ನ ಅವಲಂಬಿಸದೆ, ಅಗತ್ಯವಾದ ವಿಷಯಗಳಲ್ಲಿ ಪರಸ್ಪರಾವಲಂಬನೆಯೊಂದಿಗಿರುವ ಗಣರಾಜ್ಯಗಳಾಗ ಬೇಕಿತ್ತು. ಆದರೆ ಇಂದು ರೈತ ಮತ್ತು ಅವನ ಹಳ್ಳಿಗಳು ಅಭಿವೃದ್ಧಿಯ ಭರಾಟೆಯಲ್ಲಿ ಮುನ್ನುಗ್ಗುತ್ತಿರುವ ನಗರಗಳೆಂಬ ಅಕ್ಟೋಪಸ್‌ನ ಕೈಗೆ ಸಿಕ್ಕಿಹಾಕಿಕೊಂಡಿವೆ. ಅದರ ಕೈಯಿಂದ ಬಿಡುಗಡೆಯ ಸಂಭವ ಕಂಡುಬರುತ್ತಿಲ್ಲ.

ಇಂದು ನಮ್ಮ ದೇಶವಷ್ಟೆ ಅಲ್ಲ ಇಡೀ ಜಗತ್ತಿನ ವಿನಾಶಕ್ಕೆ ಕಾರಣವಾಗುತ್ತಿರುವುದು ಅಭಿವೃದ್ಧಿ ಎಂಬೀ ಮೋಹದ ಪಾಶ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಾಗರ, ಅರಣ್ಯ, ಆಕಾಶ, ಭೂಮಿ, ವಾಯು ಇತ್ಯಾದ ಪಂಚಭೂತಗಳೆಲ್ಲವೂ ನಲುಗಿ ಹೋಗಿವೆ.

ಪಂಚಭೂತಗಳೇ ಹಾಳಾಗಿ ಹೋದ ಮೇಲೆ ಅವುಗಳಿಂದಲೇ ಸೃಷ್ಟಿಯಾಗಿರುವ ಈ ಮಾನವ ಪ್ರಾಣಿ ಭೂಮಿಯ ಮೇಲೆ ಬದುಕಬಲ್ಲದೆ? ಈ ಕುರಿತು ಗಂಭೀರವಾದ ಆಲೋಚನೆ ನಡೆಯುತ್ತಿಲ್ಲ. ನಡೆದರೂ ಪುನಃ ರಾಷ್ಟ್ರಗಳ ಅಭಿವೃದ್ಧಿಯ ಸ್ವಾರ್ಥಗಳ ತಾಕಲಾಟದಲ್ಲಿ ಅದು ಆವಿಯಾಗಿ ಆರಿಹೋಗುತ್ತಿದೆ. ಇದಕ್ಕೆ ಇತ್ತೀಚಿಗೆ ಈ ಸಂಬಂಧ ನಡೆದ ಕೊಪೆನ್‌ಹೇಗನ್ ಸಮಾವೇಶವೇ ಉದಾಹರಣೆಯಾಗಿ ನಮ್ಮ ಮುಂದೆ ಇದೆ. ಪರಿಸರ ವಿನಾಶದಿಂದ ಜಗತ್ತನ್ನು ಕಾಪಾಡಬೇಕೆಂದು ಎಷ್ಟು ಹುಮ್ಮಸ್ಸಿನಿಂದ ಆ ಸಮಾವೇಶ ಪ್ರಾರಂಭವಾಯಿತೊ ಅಷ್ಟೇ ವೇಗವಾಗಿ ನಿರಾಶೆಯಿಂದ ಕೊನೆಗೊಂಡಿತು. ಕೊಪನ್‌ಹಗನ್ ಸಮಾವೇಶದ ಫಲಿತಾಂಶದ ಸಂದರ್ಭದಲ್ಲಿ ಆಲ್ಡಸ್ ಹೆಕ್ಸಲಿಯವರ ಈ ಮಾತು ನೆನಪಾಗುತ್ತದೆ, "ನಾವು ಸತ್ಯವನ್ನು ತಿಳಿಯುತ್ತೇವೆ. ಆದರೆ ಸತ್ಯ ಗೊತ್ತಾದ ಮೇಲೆ ನಮಗೆ ಹುಚ್ಚು ಹಿಡಿಯುತ್ತದೆ". ಈಗ ಜಗತ್ತಿಗೆ ಹುಚ್ಚು ಹಿಡಿಯುವ ಕಾಲ ಬಂದಿದೆ. ಇಂಥ ಸಂದರ್ಭದಲ್ಲಿ ಗಾಂಧೀಯವರ ಈ ಮಾತು ಹುಚ್ಚನ್ನು ಬಿಡಿಸಬಹುದೇನೊ, ಆ ಮಾತು ಹೀಗಿದೆ, "ಜಗತ್ತಿನ ಉತ್ತಮ ಮನಸ್ಸುಗಳು ತುಂಬ ಪ್ರತ್ಯೇಕವಾದ ಹಾಗೂ ಪರಸ್ಪರ ಕಾದಾಡುವ ರಾಷ್ಟ್ರಗಳನ್ನು ಬಯಸುವುದಿಲ್ಲ. ಬದಲಿಗೆ ಸ್ನೇಹಪೂರ್ಣವಾದ ಪರಸ್ಪಾರವಲಂಬಿತ ರಾಷ್ಟ್ರಗಳನ್ನು ಇಂಥ ಪರಿಸ್ಥಿತಿಯ ನಿರ್ಮಾಣ ಬಹು ದೂರವಿರಬಹುದು, ಆದರೆ ಸ್ವಾತಂತ್ರ್ಯಕ್ಕಿಂತ ವಿಶ್ವಾತ್ಮಕ ಪರಸ್ಪರಾವಲಂಬನೆಗೆ ನಾವು ಸಿದ್ಧರಿದ್ದೇವೆಂಬ ವಿಷಯದಲ್ಲಿ ಭಾರತದ ಪರವಾಗಿ ನಾನು ಬಹು ದೊಡ್ಡ ಅಭಿಪ್ರಾಯ ಹೇಳ ಬಯಸುವುದಿಲ್ಲ. ಆದರೆ ಅಂಥ ವಿಶ್ವವ್ಯಾಪಕ ಪರಸ್ಪರಾವಲಂಬನೆಗೆ ನಾವು ಸಿದ್ಧರೆಂದು ಹೇಳುವುದರಲ್ಲಿ ಯಾವ ದೊಡ್ಡತನವನ್ನಾಗಲಿ, ಅಸಾಧ್ಯತೆಯನ್ನಾಗಲೀ ನಾನು ಕಾಣುವುದಿಲ್ಲ" ಗಾಂಧೀಜಿ ಈ ಮಾತನ್ನು ಹೇಳಿದ್ದು ೧೯೨೪ರಲ್ಲಿ. ಇಂದಿಗೆ ಎಂಬತ್ತಾರು ವರ್ಷಗಳ ಹಿಂದೆ. ಆದರೆ ಜಗತ್ತು ಇಂದೂ ಕೂಡ ಗಾಂಧೀಯವರ ಈ ಮಾತನ್ನು ಆಲಿಸುವ, ಸ್ವೀಕರಿಸುವ, ಪಾಲಿಸುವ ಮನೋಭೂಮಿಕೆಯಲ್ಲಿ ಇಲ್ಲ. ಆದರೆ ಇದರ ಪರಿಣಾಮ ಭೀಕರ, ಎರಡು ಮಹಾಯುದ್ಧಗಳು ನಡೆದು ಹೋದವು, ಲೀಗ್ ಆಫ್ ನೇಶನ್ಸ್ ಕುಸಿಯಿತು; ವಿಶ್ವರಾಷ್ಟ್ರ ಸಂಸ್ಥೆ ಕೇವಲ ಬೆದರು ಗೊಂಬೆಯಾಗಿದೆ; ಮೂರನೆ ಮಹಾಯುದ್ಧದ ಕಾರ್ಮೋಡಗಳು ಆಗಸದಲ್ಲಿ ಆಗಾಗ ಕಾಣಿಸುತ್ತಲೇ ಇವೆ. ಇದಕ್ಕೆಲ್ಲ ಕಾರಣ ಆ ಅಭಿವೃದ್ಧಿಯೆಂಬ ಅಪ್ಸರೆಯ ನರ್ತನ. ಅಭಿವೃದ್ಧಿಯೆಂಬ ಗಾಣದ ಕರ್ಕಶಧ್ವನಿ ಮುಗಿಯಿಲ್ಲದ ಮುಗಿಲಲ್ಲಿ ಗುಡುಗಾಡುತ್ತಿದೆ. ಸಮಸ್ತ ಗ್ರಾಮೀಣ ಬದುಕಿನ ಪ್ರತಿನಿಧಿಯಾದ ರೈತ, ಗ್ರಾಮ ಜೀವನವನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಬ್ಬ ಪರಿಸರ ಪ್ರೇಮಿ, ಚಿಕ್ಕ-ಚಿಕ್ಕ ವೃತ್ತಿಗಳಲ್ಲಿ ತೊಡಗಿರುವ ಜನರು ಅಭಿವೃದ್ಧಿಯೆಂಬ ಗಾಣಕ್ಕೆ ಸಿಕ್ಕ ಕಬ್ಬಿನಂತಾಗಿದ್ದಾರೆ.

ವಿನೋಬಾರ ಈ ಮಾತು ಆಧುನಿಕ ಅಭಿವೃದ್ಧಿಯ ಪುಜಾರಿಗಳ ಜಾಣತನವೆಂಬ ದಡ್ಡತನವನ್ನು ಈ ರೀತಿ ತೋರಿಸುತ್ತದೆ ನದಿ ದಾಟಲು ಹೊರಟ ಕೆಲ ಪಂಡಿತರು ಅದರ ಸರಾಸರಿ ಆಳವನ್ನು ಲೆಕ್ಕಾಚಾರದ ಮೂಲಕ ತಿಳಿದು ದಾಟಲು ಉಪಕ್ರಮಿಸಿದರು. ಆದರೆ ಅವರ ಲೆಕ್ಕಾಚಾರ ತಪ್ಪಿ ನದಿಯೊಳಗೆ ಮುಳುಗಿಹೋದರು. ಅಂತೆಯೇ ಅಭಿವೃದ್ಧಿಯ ತಪ್ಪು ಲೆಕ್ಕಾಚಾರದಲ್ಲಿ ಜಗತ್ತು ಮುಳುಗಿ ಹೋಗುತ್ತಿದೆ.

* * *

ಸಮಕಾಲೀನ ಅಭಿವೃದ್ಧಿ ಕುರಿತು ಚಿಂತನೆ

– ಮಜೀದ್ ರೆಹ್‌ನೆಮಾ

ಕಳೆದ ೬೦ ವರ್ಷಗಳಲ್ಲಿ 'ಅಭಿವೃದ್ಧಿ'ಯ–ಡೆವಲಪ್‌ಮೆಂಟ್‌ನ–ಪರಿಕಲ್ಪನೆ ಕುರಿತು ನಡೆದಷ್ಟು ತೀವ್ರವಾದ ಚರ್ಚೆ ಬೇರೆ ಯಾವ ವಿಷಯದ ಬಗ್ಗೆಯೂ ನಡೆದಿಲ್ಲ. ಯಾವ ವಿಚಾರವೂ ಅಷ್ಟು ಪ್ರಶಂಸೆಯನ್ನೂ ಗಳಿಸಿಲ್ಲ; ಅಷ್ಟು ಟೀಕೆಗೂ ಒಳಗಾಗಿಲ್ಲ. ದ್ವಿತೀಯ ಮಹಾಯುದ್ಧದ ಕೊನೆಯ ವೇಳೆಗೆ, 'ಅಭಿವೃದ್ಧಿ'ಯು ಬಡಜನತೆಯ ಕನಸುಗಳನ್ನು ಸಂಕೇತಿಸುವ ಶಬ್ದವಾಗಿತ್ತು; ಹಾಗೂ ವಸಾಹತುಶಾಹಿ, ಹಸಿವು, ಶೋಷಣೆ ಮೊದಲಾದ ಇನ್ನೂ ಹಲವು ಬಗೆಯ ದುಃಖ ದುಮ್ಮಾನಗಳಿಂದ ಬಿಡುಗಡೆಗೊಳಿಸಬಲ್ಲ ಹೊಸ ಭವಿಷ್ಯದ ಆಶೋತ್ತರಗಳನ್ನು ಸಂಕೇತಿಸುವ ಶಬ್ದವೂ ಆಗಿತ್ತು. ಆದರೆ ಇಂದು ಕೋಟ್ಯಂತರ ಜನರ ಪಾಲಿಗೆ ಅಭಿವೃದ್ಧಿಯು ಒಂದು ಕೆಟ್ಟ ಕನಸಾಗಿ ಕಾಡುತ್ತಿದೆ. ಜಾಗತಿಕ ಉತ್ಪಾದನಾ ಶಕ್ತಿಯ ಹೆಚ್ಚಳದಿಂದಾಗಿ ಈಗ ೯ ಬಿಲಿಯ ಜನರಿಗೆ ಅಗತ್ಯವಾಗುವಷ್ಟು ಆಹಾರ ಬೆಳೆಸುವುದು ಸಾಧ್ಯವಾಗಿದೆ; ಅದು ಜಗತ್ತಿನ ಈಗಿನ ಜನಸಂಖ್ಯೆಗಿಂತ ಒಂದೂವರೆ ಪಟ್ಟು ಜಾಸ್ತಿ ಜನರಿಗೆ ಸಾಕಾಗುವಷ್ಟು ಆಹಾರ. ಆದರೂ ಇಂದು ಜಗತ್ತಿನಲ್ಲಿ ೧ ಬಿಲಯಕ್ಕಿಂತಲೂ ಜಾಸ್ತಿ ಜನ ಹಸಿವು ಮತ್ತು ಅಪೌಷ್ಠಿಕತೆಗಳನ್ನು ಅನುಭವಿಸುತ್ತಿದ್ದಾರೆ.

ಈ ಪರಿಸ್ಥಿತಿ ಅನೇಕ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. 'ಅಭಿವೃದ್ಧಿ' ಎಂಬುದು ನಿಜಕ್ಕೂ ಆ ಪರಿಕಲ್ಪನೆಯ ಆರಾಧಕರು ಹೇಳುವ ಹಾಗಿದೆಯೆ? ತನ್ನ ಆರಂಭದ ದಿನಗಳ ಹಾಗೆ ಈಗಲೂ ಅಭಿವೃದ್ಧಿಯು ಬಿಡುಗಡೆ ಮತ್ತು ಪರಿವರ್ತನೆಗಳನ್ನು ಸೂಚಿಸುತ್ತಿದೆಯೆ? ಅಭಿವೃದ್ಧಿಯ ವಾಗ್ವಾದವು ಯಾವುದರ ವಿರುದ್ಧ ತಾನು ಹೋರಾಡಬೇಕು ಎಂದು ಉದ್ದೇಶಿಸಿದೆಯೋ, ಅದೇ ವಸಾಹತುಶಾಹಿ ಮತ್ತು ಆಳುವವರ ಹಿತಾಸಕ್ತಿಗಳನ್ನು ಕಾಪಾಡುವಂತಹ ಒಂದು ಟ್ರೋಜನ್ ಕುದುರೆಯಲ್ಲವೆ? ಕೊನೆಯದಾಗಿ, ಅಭಿವೃದ್ಧಿಯ ಅಂಗೀಕೃತ ವ್ಯಾಖ್ಯಾನವನ್ನು ಜನರು ನಂಬುವುದಿಲ್ಲ ಎಂದಾದರೆ, ಈ ತಥಾಕಥಿತ ಆರ್ಥಿಕ ಅಭಿವೃದ್ಧಿಯಿಂದ ಆತಂಕಿತವಾಗಿರುವ ಜೀವನ ಮತ್ತು ಜೀವನಕ್ರಮಗಳಿಗೆ ಹಾಗೂ ಈ ತಥಾಕಥಿತ ಆರ್ಥಿಕ ಅಭಿವೃದ್ಧಿಯಿಂದ ಅಪಾಯಕ್ಕೆ ಸಿಕ್ಕಿಕೊಂಡಿರುವ ಮಿಲಿಯಗಟ್ಟಲೆ ಜನರಿಗೆ ಯಾವ ಪರ್ಯಾಯವಿದೆ? ಈ ಪ್ರಶ್ನೆಗಳನ್ನು ಉತ್ತರಿಸುವುದು ಸುಲಭ ಸಾಧ್ಯವಲ್ಲ. ಯಾಕೆಂದರೆ ಅಭಿವೃದ್ಧಿ ಅಥವಾ ಡೆವೆಲಪ್‌ಮೆಂಟ್ ಎಂಬ ಶಬ್ದವು ಅಮೀಬಾದಂತೆ ಬಣ್ಣ, ಆಕಾರಗಳನ್ನು ಬದಲಾಯಿಸಿಕೊಳ್ಳಬಲ್ಲ ಜಲಚರ ಅಣುಜೀವಿಯಂತೆ ಸಮಯ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥಗಳನ್ನು ಧರಿಸಬಲ್ಲದ್ದಾಗಿದೆ. ಅದಕ್ಕೆ ನೀವು ಆರೋಪಿಸಬಹುದಾದ ಎಲ್ಲ ಅರ್ಥಗಳೂ ಇವೆ; ಅದು ಅಷ್ಟೇ ಅರ್ಥಹೀನವಾಗಿಯೂ ಇದೆ. ಒಂದೊಂದು ಕಾಲದೇಶದಲ್ಲೂ ಅದಕ್ಕೆ ಒಂದೊಂದು ಅರ್ಥವಿದೆ. ಉತ್ತರ

ಗೋಲಾರ್ಧದಲ್ಲಿ (ಅಂದರೆ ಯುರೋಪ್, ಅಮೇರಿಕಗಳಲ್ಲಿ) ಅನೇಕರಿಗೆ ಅಭಿವೃದ್ಧಿ ಎಂದರೆ ಮಗುವಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆ; ಕೆಲವೊಮ್ಮೆ ಅದು ಆಟ, ಕತೆ ಅಥವಾ ಎದುರಾಳಿಯನ್ನು ಸೋಲಿಸುವ ತಂತ್ರದ ಬೆಳವಣಿಗೆ. ಅದು ಗೃಹನಿರ್ಮಾಣ ಯೋಜನೆಯೊಂದು ರೂಪುಗೊಳ್ಳುವ ಬಗೆಯನ್ನೂ ಸೂಚಿಸಬಹುದು. ವೆಬಸ್ಟರ್ಸ್ ಡಿಕ್ಷನರಿಯಲ್ಲಿ ಡೆವೆಲಪ್ ಎಂಬ ಇಂಗ್ಲಿಷ್ ಭಾಷೆಯ ಕ್ರಿಯಾಪದಕ್ಕೆ ಕೊಟ್ಟಿರುವ ಒಂದು ಅರ್ಥ, 'ಮೊಗ್ಗು ನಿಧಾನವಾಗಿ ಅರಳಿ ಹೂವಾಗುವ ಪ್ರಕ್ರಿಯೆ'.

ಈ ಅರಳುವಂತಹದ್ದೇ ಪ್ರಕ್ರಿಯೆ ಅಥವಾ ವಿಕಾಸವನ್ನು ಸೂಚಿಸಲು 'ಅಭಿವೃದ್ಧಿ'ಯ ವಕ್ತಾರರು ಆ ಶಬ್ದವನ್ನು 'ಅಬಾರಿ' (ಪರ್ಷಿಯನ್ ಭಾಷೆಯಲ್ಲಿ ವಾಸಯೊಗ್ಯವಾದ ಸ್ಥಳ) ಅಥವಾ 'ಇಮ್ರಾನ್' (ಇದು ಇಬ್‌ನ್ ಖಾಲ್ದುನ್ ಮತ್ತೆ ಮತ್ತೆ ಬಳಸುವ ಶಬ್ದ. ಅರ್‍ಯಾಬಿಕ್‌ನ 'ಇಮ್ರ್' ಎಂಬ ಧಾತುವಿನಿಂದ ಹುಟ್ಟಿದ ಈ ಶಬ್ದ ಸಾರ್ಥಕ ಬದುಕು, ಒಂದು ಸ್ಥಳದಲ್ಲಿ ನೆಲಸಿ, ಅಲ್ಲಿನ ನೆಲವನ್ನು ಕೃಷಿಗೆ ಹಸನುಮಾಡುವುದು, ಇವೇ ಮುಂತಾದ ಅರ್ಥಗಳನ್ನು ಸೂಚಿಸುತ್ತದೆ.) ಅಥವಾ 'ಫಿದ್ನಾ' (ಎಥಿಯೋಪಿಯದ ಬೊರಾನಾ ಬುಡಕಟ್ಟಿನ ಈ ನುಡಿಗಟ್ಟು ಕಾಲ ಮತ್ತು ತಲೆಮಾರುಗಳ ಮೂಲಕ ಹರಿದು ಬರುವ ಜೀವನ ಪ್ರವಾಹವನ್ನೂ ಸೂಚಿಸುತ್ತದೆ) – ಇವುಗಳಿಗೆ ಬದಲಿಯಾಗಿ ಬಳಸುತ್ತಾರೆ. ಒಟ್ಟಿನಲ್ಲಿ ಈ 'ಡೆವೆಲಪ್‌ಮೆಂಟ್' ಎಂಬ ಶಬ್ದವನ್ನು ಪ್ರಾಚೀನ ನಾಗರೀಕತೆಗಳ ಭಾಷೆಗಳ ಒಳಗೂ ತುರುಕಿ, ಸಮುದಾಯಗಳು ತಮ್ಮ ಬದುಕನ್ನು ರೂಢಿಸಿಕೊಳ್ಳಲು ಹಾಗೂ ತಮ್ಮ ಅವಶ್ಯಕತೆಗಳನ್ನು ನೀಗಸಿಕೊಳ್ಳಲು ಲಾಗಾಯ್ತಿನಿಂದಲೂ ಅನುಸರಿಸಿಕೊಂಡು ಬಂದಿರುವ ದೇಸೀಯ ವಿಧಾನಗಳನ್ನೂ ಅದು ಒಳಗೊಳ್ಳುವಂತೆ ಮಾಡಲು ಯತ್ನಿಸಲಾಗಿದೆ.

ಹಾಗಾಗಿ, ಆಧುನಿಕ ಅರ್ಥಶಾಸ್ತ್ರವನ್ನು ಮತ್ತು ರಾಷ್ಟ್ರೀಯ ಅಂತರಾಷ್ಟ್ರೀಯ ಸಂಸ್ಥೆಗಳ ಹೊಸ ಪರಿಭಾಷೆಯಲ್ಲಿ ಬೆಳವಣಿಗೆ ಮತ್ತು ಪರಿವರ್ತನೆಗಳನ್ನು ಸೂಚಿಸಲು, ಅದರಲ್ಲೂ ವಿಶೇಷವಾಗಿ ಆಧುನಿಕರಣದ ಯತ್ನಗಳು, ಬಡತನ ನಿರ್ಮೂಲನ ಹಾಗೂ ಆರ್ಥಿಕ ಹಿಂದುಳಿದಿರುವಿಕೆ, ಅಪೌಷ್ಠಿಕತೆ, ನಿರ್ವಸತಿ, ರೋಗರುಜಿನ, ಅನಕ್ಷರತೆ ಮತ್ತು ಸಾಮಾಜಿಕ ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆಗಳ ಪರಿಹಾರೋಪಾಯ ಕುರಿತು ಹೇಳಲು ಡೆವೆಲಪ್‌ಮೆಂಟ್ / ಅಭಿವೃದ್ಧಿ ಎಂಬ ಶಬ್ದವನ್ನೇ ಬಳಸಲಾಗುತ್ತಿದೆ.

ಈ ಪ್ರಕಾರವಾಗಿ 'ಆರ್ಥಿಕವಾಗಿ ಹಿಂದುಳಿದಿರುವ' ದೇಶಗಳ ಆಧುನೀಕರಣಗೊಂಡ ಕುಲೀನ ವರ್ಗಕ್ಕೆ ಸೇರಿದವರು, ತಾವು ರಾಷ್ಟ್ರೀಯ ಅಭಿವೃದ್ಧಿಯ ಪ್ರತಿಪಾದಕರು ಎಂದು ಕರೆಸಿಕೊಳ್ಳಲು ಹೆಮ್ಮೆ ಪಡುತ್ತಾರೆ. ಅವರು ಪ್ರತಿಪಾದಿಸುವ ಈ ಅಭಿವೃದ್ಧಿ ಯಾರನ್ನು ಉದ್ದೇಶಿಸಲಾಗಿದೆಯೋ, ಆ ಜನಗಳು ವಸಾಹತುಶಾಹಿ ಮತ್ತು ವಿದೇಶಿ ಯಜಮಾನಿಕೆಗೆ 'ಅಭಿವೃದ್ಧಿ'ಯು ಒಂದು ಸವಾಲು ಮತ್ತು ಪರಿಹಾರ ಎಂದು ಮೊದಮೊದಲು ಭಾವಿಸಿದ್ದು ನಿಜ. ಆದರೆ ಈಗ ಆ ಜನಗಳಿಗೆ ಅಭಿವೃದ್ಧಿಯ ಪರಿಕಲ್ಪನೆ ಕುರಿತ ವಿಶ್ವಾಸ ಹೊರಟುಗೋಗಿದೆ. ಈಗ, ಅವರ ಮಟ್ಟಿಗೆ ಅಭಿವೃದ್ಧಿಯು ಒಂದೋ ಅರ್ಥಹೀನ ವಿಚಾರವಾಗಿದೆ ಅಥವಾ ಅದು ಯಜಮಾನಿಕೆಯ ಹೊಸ ಮತ್ತು ಪರಿಷ್ಕೃತ ವಿಧಾನಗಳಿಗೂ, ಸಮುದಾಯಗಳ

ಸ್ವಯಂಶಕ್ತಿ ಮತ್ತು ಅರ್ಥವ್ಯವಸ್ಥೆಯ ಸ್ವಾಯತ್ತತೆಯನ್ನು ನಾಶಪಡಿಸುವುದಕ್ಕೂ, ಹಾಗೂ ಜಾಗತಿಕ ಮಾರುಕಟ್ಟೆಯ ಹೊಸ ದಣಿಗಳಿಗೆ ತಮ್ಮ ದೇಶಗಳನ್ನು ಒತ್ತೆ ಇಡಲು ಬೇಕಾದ ಅಂಗೀಕಾರ, ಅಧಿಕೃತತೆಗಳನ್ನು ಪಡೆಯುವುದಕ್ಕೂ ಮಾಡಿರುವ ಕುಟಿಲೋಪಾಯದಂತೆ ಕಾಣುತ್ತಿದೆ.

ಕಳೆದ ಆರು ದಶಕಗಳಲ್ಲಿ ದಕ್ಷಿಣದ (ಅಂದರೆ ಏಷ್ಯ, ಆಫ್ರಿಕ ಮತ್ತು ದಕ್ಷಿಣ ಅಮೇರಿಕ ಖಂಡಗಳು) ಜನ ಸಮುದಾಯಗಳನ್ನು ಸರಾಸಗಟಾಗಿ ಒಕ್ಕಲೆಬ್ಬಿಸುವುದರಲ್ಲಿ ಹಾಗೂ ತಮ್ಮ ಜೀವನಕ್ರಮಗಳನ್ನೂ ಜೀವನಾಧಾರಗಳನ್ನೂ ತಾವೇ ಕೈಯಾರೆ ನಾಶಪಡಿಸುವಂತೆ ಬಲಾತ್ಕರಿಸುವುದರಲ್ಲಿ 'ಅಭಿವೃದ್ಧಿ'ಯ ಪರಿಕಲ್ಪನೆಯು ಬಹು ದೊಡ್ಡ ಪಾತ್ರವಹಿಸಿತ್ತು ಎನ್ನುವುದೇ ಈ ಜನರ ಭ್ರಮನಿರಸನಕ್ಕೆ ಮುಖ್ಯ ಕಾರಣವಾಗಿದೆ. 'ಅಭಿವೃದ್ಧಿ'ಯು ಈ ದೇಶಗಳ ಅಸಂಖ್ಯ ಜನರು ತಮ್ಮ ಊರು ಮನೆಗಳನ್ನು ತೊರೆದು ನಗರಗಳ ಕೊಂಪೆಗಳಿಗೆ ವಲಸೆ ಹೋಗುವಂತೆ ಮಾಡಿದೆ. ಹಳ್ಳಿಗಳ ಬಡವರು ಈ ಕೊಂಪೆಗಳಲ್ಲಿ ದರಿದ್ರರಾಗಿ ಪರಿವರ್ತಿತರಾಗಿದ್ದಾರೆ. ಅವರ ಹೊಸ ಸಾಮಾಜಿಕ ಸಂದರ್ಭ ಹುಟ್ಟು ಹಾಕಿರುವ ಬೇಡಿಕೆಗಳನ್ನು ಪೂರೈಸಲು ಅವರ ಚೂರುಪಾರು ಗಳಿಕೆಯಿಂದ ಸಾಧ್ಯವಿಲ್ಲ. ಹೆಚ್ಚು ಕಡಿಮೆ ಈ ಎಲ್ಲ ದೇಶಗಳಲ್ಲೂ ಈಗ ಅಭಿವೃದ್ಧಿಯ ಪರಿಕಲ್ಪನೆಯನ್ನು, ಈಗಾಗಲೇ ಅಭಿವೃದ್ಧಿ ಹೊಂದಿರುವ ದೇಶಗಳ ಹಿತಾಸಕ್ತಿಗಳ ಕೈಗೊಂಬೆಯಾಗಿರುವ ತಮ್ಮ ದೇಶದ ಸರಕಾರಗಳ ಜೊತೆ ಸಮೀಕರಿಸಲಾಗಿದೆ. ಇದು ಒಂದು ವಿರೋಧಾಭಾಸವೆಂಬಂತೆ ತೋರಬಹುದಾದರೂ ಅಭಿವೃದ್ಧಿ ಎಂದರೆ ರಾಷ್ಟ್ರೀಯ ಮಟ್ಟದಲ್ಲಿ ದಬ್ಬಾಳಿಕೆಯನ್ನು ಕಾನೂನುಬದ್ಧಗೊಳಿಸುವುದು, ಅರಣ್ಯ ನ್ಯಾಯವನ್ನು ಅನುಸರಿಸುವುದು, ಜನರ ಪ್ರತಿರೋಧ ಶಕ್ತಿಯನ್ನು ನಾಶಪಡಿಸುವುದು, ಹಾಗೂ ಜನತೆಯ ಸಂಪನ್ಮೂಲ ಮತ್ತು ಪ್ರತಿಭೆಗಳನ್ನು ಹರಾಜು ಹಾಕುವುದು ಎಂದೇ ಜನ ಭಾವಿಸತೊಡಗಿದ್ದಾರೆ. ಒಟ್ಟಿನಲ್ಲಿ ಅಭಿವೃದ್ಧಿಯ ಪರಿಕಲ್ಪನೆ, ಮೊದಲು ಯಾವ ವಿಮೋಚನೆಯ ಭರವಸೆಗಳ ಸಂಕೇತವಾಗಿತ್ತೋ, ಈಗ ಅದೆಲ್ಲದರ ತದ್ವಿರುದ್ಧವಾಗಿದೆ.

ಈ ಹೊಸ ಬೆಳವಣಿಗೆಗಳನ್ನು ಗಮನದಲ್ಲಿ ಇರಿಸಿಕೊಂಡು ವೆಬ್‌ಸ್ಟರ್ ಡಿಕ್ಷನರಿಯನ್ನು ಪರಿಷ್ಕರಿಸಿದ್ದೇ ಆದರೆ ಅಭಿವೃದ್ಧಿ / ಡೆವೆಲಪ್‌ಮೆಂಟ್ ಎಂಬ ಶಬ್ದಕ್ಕೆ ಪ್ರಾಯಶಃ ಹೀಗೆ ಅರ್ಥ ಹೇಳಬೇಕಾಗಿಬರಬಹುದು: 'ಅಭಿವೃದ್ಧಿಯೆಂಬುದು ಆಧುನಿಕಕಾಲದ ಒಂದು ವಿರೂಪೀಕರಣದ ಪ್ರಕ್ರಿಯೆ ಇದು ತಳಿವಿಜ್ಞಾನ ಮತ್ತು ಹೊಸತಳಿಗಳ ನಿರ್ಮಾಣದಲ್ಲಿ ಪರಿಣತಿ ಪಡೆದ ಭಾರೀ ಕೈಗಾರಿಕಾ ಸಂಸ್ಥೆಗಳು ತಮ್ಮ ಆಧುನಿಕ ಮ್ಯಾನೇಜ್‌ಮೆಂಟ್ ಕೌಶಲ, ತಂತ್ರಜ್ಞಾನ ಮತ್ತು ಅರ್ಥವ್ಯವಸ್ಥೆಯ ಇತ್ತೀಚೆಗಿನ ಕಾರ್ಯವಿಧಾನಗಳನ್ನು ಬಳಸಿಕೊಂಡು, ಜಾಗತಿಕ ಮಾರುಕಟ್ಟೆಯಲ್ಲಿ ಭಾರೀ ಲಾಭ ಹೊಡೆಯಲು ಅನುಕೂಲ ಮಾಡಿಕೊಡುವಂತಹ ವಿಶಿಷ್ಟ ಸಸ್ಯ ತಳಿಗಳನ್ನು ಒಮ್ಮೆ ಮಾತ್ರ ಹೂವು ಅಥವಾ ಹಣ್ಣು ಬಿಟ್ಟು ನಂತರ ಬಂಜೆಯಾಗುವ ಸಸ್ಯ ತಳಿಗಳನ್ನು "ಅಭಿವೃದ್ಧಿ"ಪಡಿಸುವುದಕ್ಕೆ ಸಮಾನಾಂತರವಾದೊಂದು ಪ್ರಕ್ರಿಯೆ'. ಕೆಲವೇ ವರ್ಷಗಳ ಕೆಳಗೆ, ವಿಶ್ವರಾಷ್ಟ್ರ ಸಂಸ್ಥೆಯ ೫೦ನೇ ವರ್ಷಾಚರಣೆಯ ಸಂದರ್ಭದಲ್ಲಿ, ಆ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳೂ ಸರ್ವಾನುಮತದಿಂದ ಅಭಿವೃದ್ಧಿಯ

ಪರಿಕಲ್ಪನೆಯನ್ನು ಯಾಕೆ ಅನುಮೋದಿಸಿದರು? ಯಾಕೆ ಅಭಿವೃದ್ಧಿಯ ಆಶಯಗಳಿಗೆ ಜಾಗತಿಕ ಮಟ್ಟದ ಬದ್ಧತೆ ಬೇಕು ಎಂದು ಕರೆಕೊಟ್ಟರು? ಈ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳಲಾಗಿದೆ.

ಇದಕ್ಕೆ ಉತ್ತರವನ್ನು ಎರಡು ವಿಭಿನ್ನ ಬಗೆಯ ಕಾರಣಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಮೊದಲನೆಯ ಕಾರಣ, 'ಹಿಂದುಳಿದಿರುವಿಕೆ' ಎಂಬ ನುಡಿಗಟ್ಟನ್ನು ಚಾಲ್ತಿಗೆ ತಂದು ಅದನ್ನು ತಮ್ಮ ಉದ್ದೇಶಗಳಿಗೆ ತಕ್ಕಂತೆ ದುಡಿಸಿಕೊಳ್ಳಲು ಅನುಕೂಲವಾಗುವಂತೆ, ಆಧುನಿಕ ಅರ್ಥವ್ಯವಸ್ಥೆಗಳ ನೇತಾರರು, ಅದಕ್ಕೆ ತಮ್ಮದೇ ಆದ ಅರ್ಥಗಳನ್ನು ಹಚ್ಚಿದ್ದು. ಒಂದು ನೂರು ವರ್ಷಗಳಿಗೂ ಕಡಿಮೆ ಕಾಲಾವಧಿಯಲ್ಲಿ, ಈ ನೇತಾರರು, ಹೆಚ್ಚು ಕಡಿಮೆ ಜಗತ್ತಿನ ಎಲ್ಲ ಭಾಷೆಗಳಲ್ಲೂ, ಆಧುನಿಕ ಅರ್ಥವ್ಯವಸ್ಥೆ ರೂಪುಗೊಳ್ಳುವುದಕ್ಕೆ ಮೊದಲೇ ಇದ್ದ ಎಲ್ಲ ಬಗೆಯ ಸಮಸ್ಯೆ ಮತ್ತು ಸಂಕಷ್ಟಗಳಿಗೂ 'ಹಿಂದುಳಿದಿರುವಿಕೆ' ಎಂಬ ಈ ಹೊಸ ಸಂರಚನೆಯನ್ನು ಸಂವದಿನ್ನಾಗಿ ಆಡುವುದರಲ್ಲಿ ಸಫಲರಾದರು. ಲೋಕಜೀವನದ ಸಮಸ್ತವನ್ನೂ ಕಪ್ಪು-ಬಿಳಿ, ಒಳಿತು-ಕೆಡಕು, ಸುಖ-ದುಃಖ, ನ್ಯಾಯ-ಅನ್ಯಾಯ ಹೀಗೆ ಕೇವಲ ಎರಡು ಬಗೆ ಎಂದು ವಿಮಗಡಿಸಿ ನೋಡುವ ಯೋಚನಾಕ್ರಮವೇ ಪ್ರಧಾನವಾಗಿರುವ ಆಧುನಿಕ ಜಗತ್ತಿನಲ್ಲಿ ಗತಕಾಲದ ಬಳುವಳಿಯಾಗಿರುವ ಎಲ್ಲ ಸಂಕಷ್ಟಗಳಿಗೂ 'ಅಭಿವೃದ್ಧಿ'ಯು ಪ್ರಶ್ನಾತೀತವಾದ ಏಕೈಕ ಪರಿಹಾರ ಎಂಬ ವಾದವನ್ನು ಮುಂದಿಡಲಾಯಿತು. ಇದನ್ನೇ ಬೇರೆ ಶಬ್ದಗಳಲ್ಲಿ ವಿವರಿಸುವುದಾದರೆ ಈ ಜಗತ್ತಿನ ಎಲ್ಲ ನೊಂದವರಿಗೂ ಯಥಾಸ್ಥಿತಿ ಯಾ 'ಅಭಿವೃದ್ಧಿ'ಯ ಸುಖೀಜೀವನದ ಆಶ್ವಾಸನೆ – ಎರಡರಲ್ಲಿ ಒಂದನ್ನು ಆಯ್ದುಕೊಳ್ಳುವ ಮುಕ್ತ ಸ್ವಾತಂತ್ರ್ಯ, ಚರಿತ್ರೆಯಲ್ಲೇ ಮೊದಲ ಬಾರಿಗೆ ಅವರಿಗೆ ಕೊಡಲಾಗಿದೆ ಎಂಬ ಪ್ರಭಾವಶಾಲೀ ಸಂದೇಶವೊಂದನ್ನು ಕೊಡಲಾಯಿತು.

ಎರಡನೆಯ ಕಾರಣವನ್ನು ನಾವು, ಜ್ಞಾನ ಮತ್ತು ಅಧಿಕಾರಗಳು ಆಧುನಿಕ ಕಾಲದಲ್ಲಿ ಪಡೆದುಕೊಂಡಿರುವ ಸ್ವರೂಪದಲ್ಲಿ ಕಂಡುಕೊಳ್ಳಬಹುದು. ಅಭಿವೃದ್ಧಿಯ ಪರಿಕಲ್ಪನೆಯನ್ನು ಬೆಂಬಲಿಸುವವರಲ್ಲಿ ಎರಡು ವಿಧ. ಮೊದಲನೆಯ ಗುಂಪಿನವರು, ದೇಹರಚನೆಯ ಮಾದರಿಯ ಹಾಗೂ ಸರಳ ರೇಖಾತ್ಮಕವಾದ ಪ್ರಗತಿಯನ್ನು ಪ್ರಾಮಾಣಿಕವಾಗಿ ನಂಬುವ ಸಜ್ಜನರು. ವಿಭಿನ್ನ ಸಮಾಜಗಳ ಸಾಂಸ್ಕೃತಿಕ ವೈಶಿಷ್ಟ್ಯಗಳು ಏನೇ ಇರಲಿ, ಅವೆಲ್ಲವೂ ಜೀವಪ್ರಭೇದಗಳು ಅಥವಾ ಮಕ್ಕಳ ಹಾಗೆ ಬೆಳೆಯುತ್ತ ವಿಕಾಸಗೊಳ್ಳುತ್ತ ಸಾಗುವುದು ಅವುಗಳ ಲಕ್ಷಣ ಎಂದು ಅವರು ದೃಢವಾಗಿ ನಂಬುವವರು. ಅವರ ಪ್ರಕಾರ ಈ ಸಮಾಜಗಳು ಅಭಿವೃದ್ಧಿಯ ವಿವಿಧ ಹಂತಗಳನ್ನು ದಾಟಿ ಮುನ್ನಡೆಯುತ್ತ ಆಧುನಿಕ ಔದ್ಯಮಿಕ ರಾಷ್ಟ್ರಗಳು ಈಗ ಇರುವ ಸ್ಥಿತಿಯನ್ನೇ ತಲುಪುತ್ತವೆ. ಸಮಾಜಗಳ ಈ ಬಗೆಯ ಸರಳರೇಖಾತ್ಮಕ ಚಲನೆಯಲ್ಲಿ ವಿಶ್ವಾಸವು, ಯುರೋಪ್‌ನ ಜ್ಞಾನಯುಗ ಮತ್ತು ಫ್ರೆಂಚ್ ಮಹಾಕ್ರಾಂತಿಗಳ ವೈಚಾರಿಕತೆಯಲ್ಲಿ ಅಂತರ್ಗತವಾಗಿದ್ದು, ಕೆಲವು ಅಪವಾದಗಳನ್ನು ಹೊರತುಪಡಿಸಿ ಕಳೆದ ಎರಡು ನೂರು ವರ್ಷಗಳಲ್ಲಿ ಈ ಜಗತ್ತಿನ ಎಲ್ಲ ಸುಶಿಕ್ಷಿತರು ಹಾಗೂ ಪ್ರತಿಷ್ಠಿತರ ಯೋಚನಾಕ್ರಮವನ್ನು ಇದು ಪ್ರಭಾವಿಸಿದೆ.

'ಅಭಿವೃದ್ಧಿ'ಯ ಬೆಂಬಲಿಗರಲ್ಲಿ ಎರಡನೆಯ ಬಗೆ – ಅಭಿವೃದ್ಧಿಯೇ

ತಮ್ಮ ಬದುಕು ಮತ್ತು ಅಧಿಕಾರಗಳ ಮೂಲಾಧಾರವಾಗಿರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳ ಒಂದು ಸಂಯುಕ್ತ ಮಿಶ್ರಣ. ಜಗತ್ತಿನೆದುರು ತಮ್ಮದು ನ್ಯಾಯಸಮ್ಮತ ಆಳ್ವಿಕೆ ಎಂದು ಬಿಂಬಿಸಿಕೊಳ್ಳಬೇಕಾದ ಅಗತ್ಯವಿರುವ ನಿರಂಕುಶ ಪ್ರಭುತ್ವಗಳು, ಸಾಂಪ್ರದಾಯಿಕ ಮತ್ತು ಮನುಷ್ಯಕೇಂದ್ರಿತ ಅರ್ಥವ್ಯವಸ್ಥೆಗಳನ್ನು ನಾಶಪಡಿಸಿಯೇ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಬೇಕಾಗಿರುವ ಆಧುನೀಕರಣದ ಯೋಜನೆ ಹಾಗೂ ಆರ್ಥಿಕ ಸಂಸ್ಥೆಗಳು, ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನಗಳನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸಬೇಕಾಗಿರುವ 'ಅಭಿವೃದ್ಧಿ ಹೊಂದುತ್ತಿರುವ' ಅರ್ಥವ್ಯವಸ್ಥೆಗಳು – ಇವುಗಳೆಲ್ಲವೂ ಅಭಿವೃದ್ಧಿಯ ಪರಿಕಲ್ಪನೆಯನ್ನು ಬೆಂಬಲಿಸುವ, ಎರಡನೆಯ ಬಗೆಯವು.

ಮನುಷ್ಯ ಸಮಾಜಗಳನ್ನು ಸಂಪೂರ್ಣ ಅಭಿವೃದ್ಧಿಯತ್ತ ಕೊಂಡೊಯ್ಯುವ ಕಾರ್ಯಯೋಜನೆಯಲ್ಲಿ, ಶೀಘ್ರ ಪರಿವರ್ತನೆಯನ್ನು ಕುಂಠಿತಗೊಳಿಸುತ್ತಿರುವ 'ಓಬೀರಾಯನ ಕಾಲದ' ಜೀವನ ಕ್ರಮ ಮತ್ತು ಉತ್ಪಾದನಾ ವಿಧಾನಗಳನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವೂ ಇಲ್ಲ; ಅದು ಸಾಧುವೂ ಅಲ್ಲ ಎಂಬ ಬಗ್ಗೆ ಮಾತ್ರ ಅಭಿವೃದ್ಧಿಯ ಈ ಎರಡು ಬಗೆಯ ಬೆಂಬಲಿಗರಲ್ಲೂ ಸಹಮತವಿದೆ. ಈ ಜಗತ್ತಿನ 'ಇನ್ನೂ ಅಭಿವೃದ್ಧಿ ಹೊಂದದ' ಎಲ್ಲ ಜನ ಸಮುದಾಯಗಳಿಗೂ, ಚರಿತ್ರೆಯಲ್ಲಿ ಗೆದ್ದವರ ಸಾಲಿನಲ್ಲಿ ಸೇರಿಕೊಳ್ಳಲು, ಈಗಲಾದರೂ ಒಂದು ಅವಕಾಶವನ್ನು ಕಲ್ಪಿಸಿಕೊಡಲೇಬೇಕು ಎಂದು ಈ ಎರಡು ಗುಂಪಿನವರೂ ಭಾವಿಸುತ್ತಾರೆ. ಹಾಗಾಗಿ ಈ ಅಭಿವೃದ್ಧಿಯ ಧರ್ಮಯುದ್ಧದಲ್ಲಿ ಭಾಗಿಯಾಗುವುದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಶ್ರೀಮಂತರು ಮತ್ತು ಮುಂದುವರಿದವರ ಕರ್ತವ್ಯ ಎಂದೂ ಇವರು ಭಾವಿಸುತ್ತಾರೆ. ಆದರೆ ಈ ಗುಂಪುಗಳ ಮತ್ತು ಇವುಗಳ ಬಳಿ ಇರುವ ಶಕ್ತಿಶಾಲೀ ಮಾಧ್ಯಮಗಳ ಜಂಟೀ ಪ್ರಯತ್ನ ಈ ಕೆಳಗಿನ ಸತ್ಯಗಳನ್ನು ಮರೆಮಾಚಲಾರವು – ಅರ್ಥವ್ಯವಸ್ಥೆಯೆಂಬುದು ಅದು ಅಭಿವೃದ್ಧಿ ಹೊಂದಿರಲಿ, ಹಿಂದುಳಿದದ್ದೇ ಆಗಿರಲಿ, ಸೃಷ್ಟಿಸುವ ಬೇಡಿಕೆಗಳನ್ನು ನಿಭಾಯಿಸಬೇಕಾದ ಬಡಪಾಯಿಗಳಿಗೆ 'ಅಭಿವೃದ್ಧಿ'ಯು ಅವರ ಒಳಿತಿಗೆಂದು ಆದ ಬದಲಾವಣೆಯೂ ಅಲ್ಲ; ಅದು ದೀರ್ಘಕಾಲ ಬಾಳುವಂತಹ ಪರ್ಯಾಯವೂ ಅಲ್ಲ. ಉತ್ಪಾದನೆಯ ಆಧುನಿಕ ವಿಧಾನಗಳಿಂದಾಗಿ, ತಮ್ಮ ಹಂಬಲಗಳನ್ನು ನೀಗಿಸುವ ಬಗೆಬಗೆಯ ವಸ್ತು ಮತ್ತು ಸೇವೆಗಳನ್ನು ಪಡೆಯಬಹುದಾದಷ್ಟು ವರಮಾನ ಉಳ್ಳ 'ಮಧ್ಯಮ ವರ್ಗ'ವೊಂದು ರೂಪುಗೊಂಡಿದೆ ಎಂಬುದು ನಿಜ. ಆದರೆ ಸಂಪತ್ತು ಮೇಲಿಂದ ಕೆಳಕ್ಕೆ ಹರಿದು ಬರುವ ಈ ಪ್ರಕ್ರಿಯೆ, ಮಧ್ಯಮ ವರ್ಗವನ್ನು ಶ್ರೀಮಂತಗೊಳಿಸುವುದರ ಜೊತೆಜೊತೆಗೇ, ಅದಕ್ಕೂ ಮೀರಿದ ದೊಡ್ಡ ಸಂಖ್ಯೆಯ ಜನರನ್ನು ಕಡು ದಾರಿದ್ರ್ಯದ ಸ್ಥಿತಿಗೆ ನೂಕಿದೆ. ಆಧುನಿಕ ಉತ್ಪಾದನಾ ವಿಧಾನಗಳಿಂದ ಉಂಟಾಗಿರುವ ಅತ್ಯಂತ ದಾರುಣ ಹಾಗೂ ಅಪರಿಹಾರ್ಯ ಪರಿಣಾಮವೆಂದರೆ, ಹೊರಗಿನ ಅಪಾಯಗಳನ್ನು ಎದುರಿಸುವ ಜನರ ಸೃಜನಶೀಲತೆಯನ್ನೇ ವ್ಯವಸ್ಥಿತವಾಗಿ ನಾಶಪಡಿಸಿದ್ದು. ದಕ್ಷಿಣದ ದೇಶಗಳ ಅಭಿವೃದ್ಧಿಶೀಲ ಅರ್ಥವ್ಯವಸ್ಥೆಗಳಿಗೆ ನೆರವು ಕೊಡುವ ಸೋಗಿನಲ್ಲಿ ಉತ್ತರದ ಅಂತರಾಷ್ಟ್ರೀಯ ಸಾಲ ನೀಡಿಕೆಯ ಸಂಸ್ಥೆಗಳು ಹೇರಿರುವ ಶರತ್ತುಗಳು ಹಾಗೂ

ಅಗಾಧ ಸಾಲದ ಹೊರೆ ಈ ದೇಶಗಳ ಸ್ಥಳೀಯ ಉತ್ಪಾದನಾ ವಿಧಾನಗಳಿಗೆ ಮಾರಕ ಹೊಡೆತ ನೀಡಿದೆ.

ಬೆಂಕಿ ಅಥವಾ ಬಾಣಲೆ – ಎರಡರಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳುವುದು ಅನಿವಾರ್ಯ ಎಂದು ಸಂಕಷ್ಟದಲ್ಲಿರುವ ಜನರನ್ನು ನಂಬಿಸುವುದು, ಅಭಿವೃದ್ಧಿಯ ವಕ್ತಾರರು ಸದಾ ಬಳಸುವ ತಂತ್ರ. ಅದು ಅಥವಾ ಇದು – ಎಂಬ ಈ ತರ್ಕದ ವಿನಾಶಕಾರೀ ಪರಿಣಾಮವೆಂದರೆ, ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳುವ ಸಮುದಾಯಗಳ ಪಾರಂಪರಿಕ ತಿಳುವಳಿಕೆಗೆ ಈ ಜನರೇ ಎರವಾದದ್ದು. ಹೀಗಾಗಿ, ಅಭಿವೃದ್ಧಿಯ ಧೋರಣೆಗಳು, ಅವು ಯಾರನ್ನುದ್ದೇಶಿಸಿವೆಯೋ ಆ ಜನಗಳ ಸ್ಥಳೀಯ ಸಂಪನ್ಮೂಲಗಳನ್ನು ಹಿಗ್ಗಿಸುವ ಬದಲು ತುಳಿದು ನಾಶಪಡಿಸಿವೆ. ಪಾರಂಪರಿಕ ಹಾಗೂ ಸಂಸ್ಕೃತಿ – ವಿಶಿಷ್ಟ ಉತ್ಪಾದನಾ ವಿಧಾನಗಳ ನಾಶ, ಜೊತೆಗೆ ಗ್ರಾಮಗಳಿಂದ ಜನವಲಸೆ ಹಾಗೂ ಪ್ರತಿಭಾ ಪಲಾಯನಗಳು ಈ ದೇಶಗಳಲ್ಲಿ ಸ್ವಾವಲಂಬಿ ಮತ್ತು ಜನಪರ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಭಾರೀ ಹೊಡೆತ ಕೊಟ್ಟಿವೆ.

'ಅಭಿವೃದ್ಧಿ'ಯ ಕಾರ್ಯಚರಣೆಯ ವಿಧಾನಗಳಿಗೆ, ಅಭಿವೃದ್ಧಿಯು ಉದ್ದೇಶಿತವಾದ ಜನ ಸಮುದಾಯಗಳು ಅಲಕ್ಷ್ಯ ಯಾ ತಿರಸ್ಕಾರ ತೋರಿದಷ್ಟೂ, ಇನ್ನೊಂದೆಡೆಗೆ, ಅಭಿವೃದ್ಧಿಯ ಪ್ರಣಾಲಿಕೆಗೆ ಬದ್ಧವಾದ ರಾಷ್ಟ್ರಪ್ರಭುತ್ವಗಳು ಅಭಿವೃದ್ಧಿಯ ಪರಿಕಲ್ಪನೆಯನ್ನು ಬಳಸಿ, ಅದನ್ನೇ ಭಿನ್ನಮತವನ್ನು ಹತ್ತಿಕ್ಕುವ ಅಧಿಕಾರ–ನಿಯಂತ್ರಣ–ದಬ್ಬಾಳಿಕೆಯ ಉಪಕರಣವಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಜಾಸ್ತಿ ಆಗುತ್ತಿದೆ. ಜನರನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆಗಳನ್ನು ಬಲಪಡಿಸಲು, ಪೋಲೀಸು ಮತ್ತು ಮಿಲಿಟರಿ ಶಕ್ತಿಯನ್ನು ಹೆಚ್ಚಿಸಲು ಅಗತ್ಯವಾದ ಹಣವನ್ನು ಹೊಂದಿಸಿಕೊಳ್ಳಲು ಹಾಗೂ ಸ್ಥಳೀಯ ಜನರ ಅಗತ್ಯಗಳ ಬದಲು ಜಾಗತಿಕ ಮಾರುಕಟ್ಟೆಯ ಅಪೇಕ್ಷೆಗಳಿಗೆ ಅನುಗುಣವಾಗಿ ತಮ್ಮ ಅರ್ಥವ್ಯವಸ್ಥೆಯನ್ನು ರೂಪಿಸಲು ಅಭಿವೃದ್ಧಿಯ ಪ್ರಣಾಲಿಕೆಯನ್ನು ಈಗ 'ಹಿಂದುಳಿದ ರಾಷ್ಟ್ರಗಳಲ್ಲಿ' ಅತ್ಯಂತ ವ್ಯವಸ್ಥಿತವಾಗಿ ಬಳಸಿಕೊಳ್ಳಲಾಗುತ್ತಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ 'ಅಭಿವೃದ್ಧಿಶೀಲ' ಎನ್ನಿಸಿಕೊಂಡ ಭ್ರಷ್ಟ ಪ್ರಭುತ್ವಗಳು 'ಅಭಿವೃದ್ಧಿ ಹೊಂದಿವೆ' ಎಂದು ಹೇಳಲಾದ ರಾಷ್ಟ್ರಗಳ ಜೊತೆ ಮಾಡಿಕೊಂಡಿರುವ ಅಪವಿತ್ರ ಮೈತ್ರಿಯಿಂದ ಜಗತ್ತಿನ ಜನರೆಲ್ಲರಿಗೂ ಅಪಾಯ ಕಾದಿದೆ. ಚಾಲ್ತಿಯಲ್ಲಿರುವ ಸಾಮಾಜಿಕ ಪರಿವರ್ತನೆಯ ವಿಧಾನಗಳಿಗೆ ಒಂದು ಸಮರ್ಪಕ ಪರ್ಯಾಯವನ್ನು ಕಂಡುಕೊಳ್ಳುವ ಜನಪ್ರಯತ್ನಗಳಿಗೆ ಕೂಡ ಅದು ತಡೆ ಒಡ್ಡುತ್ತದೆ. ವಿಶ್ವರಾಷ್ಟ್ರಸಂಸ್ಥೆಯಂತಹ ಪ್ರಜಾಸತ್ತೆಯ ಸೋಗು ಹಾಕಿರುವ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮೈತ್ರಿ ಮಾಡಿಕೊಂಡಾಗ ಸಹ, ಅದು ಜನಸಾಮಾನ್ಯರಿಗೆ ಎಟುಕುವಂತಹ ಪರ್ಯಾಯಗಳಿಗೆ ವಿರುದ್ಧವಿರುವ ಹಿತಾಸಕ್ತಿಗಳನ್ನೇ ಬೆಳೆಸುವಂತಹದ್ದಾಗಿದೆ. ವಿಶ್ವರಾಷ್ಟ್ರಸಂಸ್ಥೆ ಈಗ ಚಾಲ್ತಿಗೆ ತಂದಿರುವ ಒಂದು ನುಡಿಗಟ್ಟನ್ನು ಬಳಸಿಕೊಂಡು ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ, 'ಮಾನವೀಯ ಮುಖವುಳ್ಳ ಅಭಿವೃದ್ಧಿ ಸಾಧ್ಯವೇ?'

ಎಂದು ಪ್ರಶ್ನಿಸಬಹುದಾಗಿದೆ. ಅಭಿವೃದ್ಧಿಯ ಸಂಕಥನ ಹಾಗೂ ಅದರ ಅನುಷ್ಠಾನದ ಪ್ರಾರಂಭಿಕ ಹಂತಗಳಲ್ಲಿ ಕಾಣಿಸಿಕೊಂಡ ಸೋಲುಗಳಿಂದ ಕಂಗೆಟ್ಟ ಒಂದು ತಲೆಮಾರಿನ ಸಜ್ಜನರು ಆಧುನೀಕರಣದ ಅಗತ್ಯ ಇರುವ ಜನ ಸಮುದಾಯಗಳಿಗೆ ಒಳ್ಳೆಯ ಅಭಿವೃದ್ಧಿಯನ್ನು ತಲುಪಿಸುವುದು ಹೇಗೆ ಎಂದು ತಲೆ ಕೆಡಿಸಿಕೊಂಡಿರುವುದು ಸ್ಪಷ್ಟವಾಗಿದೆ. ಈ ಸಜ್ಜನರ ಪ್ರಯತ್ನಗಳಿಂದಾಗಿ – 'ಸ್ಥಳೀಯ', 'ಮಾನವಕೇಂದ್ರಿತ', 'ತಳಮಟ್ಟದ ಜನರು ಪಾಲುಗೊಳ್ಳುವಂತಹ' ಮತ್ತು ಕೊನೆಯದಾಗಿ 'ಪರಿಸರ ತಾಳಿಕೊಳ್ಳುವಂತಹ' – ಇತ್ಯಾದಿ ಇತ್ಯಾದಿ, ಹೀಗೆ, ಅಭಿವೃದ್ಧಿಯ ವಿಭಿನ್ನ ಪರಿಷ್ಕೃತ ಪರಿಕಲ್ಪನೆಗಳು ರೂಪುಗೊಂಡಿವೆ.

ಅಭಿವೃದ್ಧಿಗೆ ಮಾನವೀಯ ಮುಖವನ್ನು ಜೋಡಿಸುವ ಇಂತಹ ಪ್ರಯತ್ನಗಳೆಲ್ಲವೂ ವಾಸ್ತವವಾಗಿ ಈಗ ಮೇಲುಗೈ ಸಾಧಿಸಿರುವ ಅಭಿವೃದ್ಧಿಯ ಹಾಲೀ ಪರಿಕಲ್ಪನೆಯ ಪರಿಧಿಯ ಒಳಗೇ ಇರುವಂತಹವಾಗಿದ್ದು, ಆ ಕಾರಣಕ್ಕೇನೆ ಅವು ಸೋಲುವುದು ಅನಿವಾರ್ಯ. ಅಭಿವೃದ್ಧಿಯ ಈ ಪರಿಷ್ಕೃತ ವ್ಯಾಖ್ಯೆಗಳಿಗೆಲ್ಲ ಮೂಲಾಧಾರವಾಗಿರುವುದು ಒಂದೇ – ಅದು, ಅಭಿವೃದ್ಧಿಯ ಕಾರ್ಯಕ್ರಮಗಳು ಎಲ್ಲ ಮನುಷ್ಯ ಕ್ರಿಯೆಗಳನ್ನೂ ಆಧುನಿಕ ಉತ್ಪಾದನೆಯ ಚೌಕಟ್ಟಿನೊಳಗೆ ತರಬೇಕು ಎಂಬ ಗ್ರಹಿಕೆ. ಈ ಬಗೆಯ ಹುಸಿಪರ್ಯಾಯಗಳಿಂದ ಜನರ ಸ್ವಂತದ ಹಾಗೂ ಸ್ವಾಯತ್ತವಾದ ಜೀವನಕ್ರಮಗಳನ್ನು ಹಾಗೂ ಉತ್ಪದನೆಯ ವಿಧಾನಗಳನ್ನು ನಾಶಪಡಿಸಲು ವ್ಯವಸ್ಥೆಗೆ ಇನ್ನಷ್ಟು ಸುಲಭವಾಗುತ್ತದೆ. 'ಜನ ಪಾಲುಗೊಳ್ಳುವ' 'ಒಳ್ಳೆಯ' ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚೆಂದರೆ ತಾತ್ಕಾಲಿಕ ಉಪಶಮನಗಳು. ಆದರೆ ಈ ಕಾರ್ಯಕ್ರಮಗಳು ಯಾವ ಆರ್ಥಿಕ ಯೋಜನೆಯ ಭಾಗವಾಗಿದೆಯೋ ಆ ಯೋಜನೆಯು ಇಡೀ ಸಮುದಾಯದ ಸೃಜನಶೀಲತೆಯನ್ನೇ ನಾಶಪಡಿಸಿಬಿಟ್ಟಿವೆ.

ಅಭಿವೃದ್ಧಿಯ ಬಲಿಪಶುಗಳಾಗಿರುವವರೇ ಪ್ರಾರಂಭಿಸಿದ ನೂರಾರು ವಿವೇಚನಾಶೀಲ ಹಾಗೂ ತಳಮಟ್ಟದ ಚಳವಳಿಗಳ ಸ್ಫೂರ್ತಿಯಿಂದ ಕಳೆದ ಕೆಲವು ದಶಕಗಳಲ್ಲಿ ಅಭಿವೃದ್ಧಿಯ ಒಟ್ಟೂ ವಿಚಾರವನ್ನೇ ಮೂಲಭೂತವಾಗಿ ಪ್ರಶ್ನಿಸುವ ವಿಚಾರ ಸರಣಿಗಳು ಹುಟ್ಟಿಕೊಂಡಿವೆ. ಈ ಹೊಸ ವಿಚಾರಗಳು ಅಭಿವೃದ್ಧಿಯ ಅಂಗೀಕೃತ ವ್ಯಾಖ್ಯೆಯ ಚೌಕಟ್ಟಿನ ಒಳಗೆಯೇ ಮಾರುಕಟ್ಟೆಯ ಅಪೇಕ್ಷೆಗಳಿಗೆ ಅನುಗುಣವಾಗಿ ರೂಪುಗೊಂಡ ಯೋಜನೆಗಳು ಇನ್ನಷ್ಟು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡುವ ಬದಲು, ಚಾಲ್ತಿಯಲ್ಲಿರುವ ಅಭಿವೃದ್ಧಿಯ ವ್ಯಾಖ್ಯೆಗೆ ಪರ್ಯಾಯವಾಗಿ ಸಮುದಾಯಗಳು ಪರಸ್ಪರ ಸಹಕಾರದೊಂದಿಗೆ, ತಮ್ಮ ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳುವುದನ್ನು ಪ್ರತಿಪಾದಿಸುತ್ತವೆ.

ಅದು ಅಥವಾ ಇದು – ಎಂಬ ಆಯ್ಕೆಗೆ ಸೀಮಿತಗೊಂಡಿರುವ ಈ ಆರ್ಥಿಕ ಅಭಿವೃದ್ಧಿಯ ತರ್ಕವೇನಿದೆ, ಅದನ್ನು ಹಿಮ್ಮೆಟ್ಟಿಸುವುದರಲ್ಲಿ ತೊಡಗಿರುವ ಸಾಮಾಜಿಕ ಕಾರ್ಯಕರ್ತರು, ತಮ್ಮ ಸಮಾಜಗಳ ಆರ್ಥಿಕ ಪುನರ್‌ರಚನೆಯಲ್ಲಿ ನಿರ್ವಹಿಸಬಹುದಾದ ಪಾತ್ರವೇನು? ಈ ಕುರಿತು ಆಸಕ್ತಿ ಹುಟ್ಟಿಸುವ ವಿಚಾರಧಾರೆಯೊಂದು ಈಗ ಮುನ್ನೆಲೆಗೆ ಬಂದಿದೆ. ತಂತಮ್ಮ ಸಾಮಾಜಿಕ ಯಾ ಆರ್ಥಿಕ ಉತ್ಪಾದನಾ ವಲಯಗಳಲ್ಲಿ ಪರಿವರ್ತನೆಯನ್ನು ತರಲು ಯತ್ನಿಸುತ್ತಿರುವ

ಸ್ಥಳೀಯ ವ್ಯಕ್ತಿಗಳು ಮತ್ತು ಸಂಘಟನೆಗಳು ತಮಗೆ ಪರಿಣತಿಯಿರುವ ಕ್ಷೇತ್ರಗಳಲ್ಲಿ ಮಾತ್ರ ಹೊಸ ಪರ್ಯಾಯಗಳ ಶೋಧನೆಯಲ್ಲಿ ತೊಡಗಿವೆ. ತಮಗೆ ಹೊರತಾದ ಹಾಗೂ ಅಮೂರ್ತವಾದ ಸಾಮಾಜಿಕ ಮತ್ತು ಸಾಂಸ್ಥಿಕ ಪರಿವರ್ತನೆಗಳ ಬಗ್ಗೆ ಅವು ಈಗ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ. ಮಾರುಕಟ್ಟೆಯ ಆರ್ಥಿಕತೆಯ ಮೇಲೆ ನಿಂತಿರುವ ಆಧುನಿಕ ಅಧಿಕಾರದ ವ್ಯವಸ್ಥೆಗಳಲ್ಲಿ ಅನಿವಾರ್ಯವಾಗಿ ಎಲ್ಲ ಸಾಮಾಜಿಕ ಕಾರ್ಯಕರ್ತರೂ ಅಭಾವ ಮತ್ತು ಬಗೆಬಗೆಯ ಸಾಮಾಜಿಕ ಅನ್ಯಾಯಗಳನ್ನು ಹುಟ್ಟುಹಾಕುವಲ್ಲಿ ಒಂದಲ್ಲ ಒಂದು ವಿಧದಿಂದ, ಪ್ರತ್ಯಕ್ಷ ಯಾ ಪರೋಕ್ಷವಾಗಿ ಸಹಭಾಗಿಗಳಾಗುತ್ತಾರೆ ಎಂಬ ಸತ್ಯವನ್ನು ಈ ಕಾರ್ಯಕರ್ತರು ಈಗ ಮನಗಂಡಿದ್ದಾರೆ. ಜನರ ಸಂಕಷ್ಟಗಳ ಮತ್ತು ಸಾಮಾಜಿಕ ನ್ಯೂನತೆಗಳ ಹಿನ್ನೆಲೆ ಕುರಿತು ಅಮೂರ್ತ ವಿಚಾರಗಳ ಮಟ್ಟದಲ್ಲಿ ಮಾತ್ರ ಯೋಚಿಸುವಷ್ಟು ಕಾಲ, ಹಾಗೂ ಅಪೇಕ್ಷಿತ ಪರಿವರ್ತನೆಗಳು ಹೊರಗಿನ ಸಂಗತಿಗಳಿಂದ ಅಥವಾ ಸಮಾಜದ ಉನ್ನತ ಸ್ತರಗಳಿಂದ ಇಳಿದು ಬರುವಂತಹವು ಅಥವಾ ಅಮೂರ್ತ ವಿಚಾರಗಳು ಮತ್ತು ಸಂಸ್ಥೆಗಳಿಂದ ಆಗತಕ್ಕವು ಎಂದು ಭಾವಿಸುವಷ್ಟು ಕಾಲ, ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆ ತೀರ ಮೇಲುಮೇಲಿನ ಮಟ್ಟದಲ್ಲೇ ಉಳಿದುಬಿಡುತ್ತದೆ. ನಾಗರಿಕ ಸಮಾಜದ ಭಾಗವೇ ಆಗಿರುವ ಸಾಮಾಜಿಕ ಕಾರ್ಯಕರ್ತರು ತಮ್ಮನ್ನು ಮೊದಲು ಪರಿವರ್ತಿಸಿಕೊಂಡು, ಬದುಕನ್ನು ಉತ್ತಮಗೊಳಿಸಲು ಹೊಸ ಪರ್ಯಾಯಗಳನ್ನು ಕಂಡುಕೊಳ್ಳಲು ತಮ್ಮೆಲ್ಲ ಸೃಜನಶೀಲ ಸಾಮರ್ಥ್ಯವನ್ನು ಮುಡಿಪಾಗಿಡಲು ಸಿದ್ಧರಾಗಬೇಕು. ಈ ಪರ್ಯಾಯಗಳು ಸಾಮಾಜಿಕ ಕಾರ್ಯಕರ್ತರ ವೈಯಕ್ತಿಕ ಇರವನ್ನೂ, ಬದುಕುವ, ಉತ್ಪಾದಿಸುವ ಮತ್ತು ತಮ್ಮ ಸಮುದಾಯದ ಜೊತೆ ಒಡನಾಡುವ ರೀತಿಗಳನ್ನೂ ಪರಿವರ್ತಿಸುವಂತಹದ್ದಾಗಿರಬೇಕು; ಜೊತೆಗೆ ಈ ಕಾರ್ಯಕರ್ತರ ಸಮಾಜಗಳನ್ನೂ ಅವು ಪರಿವರ್ತಿಸಬೇಕು. ಹಾಗಾದಾಗ ಮಾತ್ರ ನೈಜ ಮತ್ತು ತಳಮಟ್ಟದ ಪರಿವರ್ತನೆ ಸಾಧ್ಯವಾಗುತ್ತದೆ.

– ಕನ್ನಡಕ್ಕೆ : ಜಿ.ರಾಜಶೇಖರ್

ಸಾಭಾರ : ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು
(ವಿನಯ ಲಾಲ್ ಮತ್ತು ಅಶೀಶ್ ನಂದಿ ಸಂಪಾದಿಸಿರುವ ಪರಿಭಾಷಾಕೋಶ)

* * *

ಜನಪದ ಧ್ವನಿ

ಮಾಜಿ ಪ್ರಧಾನಿ ದೇವೇಗೌಡರು ಬಿಎಂಐಸಿ ಯೋಜನಗೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡಿರುವುದರ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ವಿರುದ್ಧ ಅವಾಚ್ಯ ಪದಗಳನ್ನು ಬಳಸಿದ್ದುದರ ಸುತ್ತ ಪ್ರತಿಭಟನೆ, ಚರ್ಚೆಗಳು ನಡೆಯುತ್ತಿದೆ. ಆದರೆ ಚರ್ಚೆಗಳು ನಡೆಯಬೇಕಾದ್ದು ಅದರ ಬಗೆಗಲ್ಲ, ಬದಲಿಗೆ ಯೋಜನೆಯಿಂದ ಈ ನಾಡಿಗೆ ಆಗುವ ಅನಾನುಕೂಲಗಳ ಬಗ್ಗೆ. ಅದನ್ನು ಅನುಷ್ಠಾನ ಮಾಡುವುದರ ಹಿಂದೆ ದೇವೇಗೌಡ, ಜೆ.ಎಚ್.ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್ ಮತ್ತು ಯಡಿಯೂರಪ್ಪ ಸರ್ಕಾರಗಳ ಕೈವಾಡ ಇದ್ದು, ಅವರುಗಳ ವಿರುದ್ಧ ಏನು ಕ್ರಮ ಕೈಗೊಳ್ಳಬೇಕು ಎಂಬುದರ ಸುತ್ತ ಚರ್ಚೆ ನಡೆಯಬೇಕು. ಆರ್.ವಿ.ದೇಶಪಾಂಡೆ ಮತ್ತು ಡಿ.ಕೆ.ಶಿವಕುಮಾರ್ ಅವರುಗಳೂ ಈ ಯೋಜನೆಯ ಪಾಪದ ಹಗರಣಗಳಲ್ಲಿ ಭಾಗಿಯಾಗಿದ್ದಾರೆ; ಹಲವಾರು ದೊಡ್ಡ ದೊಡ್ಡ ಅಧಿಕಾರಿಗಳು ಅಶೋಕ್ ಖೇಣಿಯ ಈ ಶತಮಾನದ ಹಗರಣದ ಸಂಚಿನ ಪಾಲುದಾರರಾಗಿದ್ದಾರೆ. ಅವರೆಲ್ಲರ ಪಾತ್ರ ಬಯಲಿಗೆ ಬಂದು, ಕಾನೂನಿನ ಪ್ರಕಾರ ಎಲ್ಲರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಬಿ.ಎಂ.ಐ.ಸಿ. ಒಕ್ಕೂಟವು ಆಗ್ರಹಿಸುತ್ತದೆ.

ಬಿಎಂಐಸಿ ವಿರೋಧಿ ಒಕ್ಕೂಟವು ಈ ಯೋಜನೆಯ ಹಿಂದಿರುವ ಕ್ರೌರ್ಯ ಮತ್ತು ಜನವಿರೋಧಿತನವನ್ನು ಸಾಕಷ್ಟು ಮುಂಚೆಯೇ ಮನಗಂಡಿತ್ತು; ಹಾಗೂ ಅದನ್ನು ಬಯಲಿಗೆಳೆಯಲು ಸಾಕಷ್ಟು ಶ್ರಮಿಸಿತ್ತು. ಒಕ್ಕೂಟದ ನೇತೃತ್ವದ ಹೋರಾಟದ ಕಾರಣದಿಂದಾಗಿಯೇ, ಯೋಜನೆಗೆ ಪರಿಸರ ಇಲಾಖೆಯ ಅನುಮತಿಯೂ ಸೇರಿದಂತೆ ಹಲವು ಅಡ್ಡಿಗಳು ಎದುರಾಗಿದ್ದವು. ನಂತರ ಯೋಜನೆ ನೆನೆಗುದಿಗೆ ಬಿದ್ದಿದ್ದರಿಂದ, ಮಂಡ್ಯ ಕೇಂದ್ರಿತವಾಗಿ ನಡೆಯುತ್ತಿದ್ದ ಹೋರಾಟವು ನಿಂತಿತ್ತು. ಆದರೆ ನಂತರದಲ್ಲಿ ಬೆಂಗಳೂರಿನ ಭಾಗದಲ್ಲಿ ೯ ಸಾವಿರಕ್ಕೂ ಹೆಚ್ಚು ಎಕರೆ ಭೂಮಿಯನ್ನು ಮೂಲ ಒಪ್ಪಂದವನ್ನು ಉಲ್ಲಂಘಿಸಿ ಪಡೆದುಕೊಂಡು, ಪೆರಿಫೆರಲ್ ರಸ್ತೆಯ ನಿರ್ಮಾಣ ನಡೆಯಿತು. ಸಾಕಷ್ಟು ಭೂಮಿಯ ಪರಭಾರೆಯೂ ಆಗಿಹೋಯಿತು. ರಸ್ತೆಯ ಎರಡೂ ಬದಿಯಲ್ಲಿ ಅಭಿವೃದ್ಧಿ ರಹಿತ ಪ್ರದೇಶ, ಗೋಡೆ ರಸ್ತೆ, ಕಡಿಮೆ ಪರಿಹಾರ, ವಿಪರೀತ ಶುಲ್ಕ, ಕಂಪನಿಯ ಗೂಂಡಾಗಿರಿ, ಭ್ರಷ್ಟಾಚಾರ, ಐಷಾರಾಮಿ ಜನರಿಗಾಗಿ ಮಾಡಿದ ಯೋಜನೆ ಹೀಗೆ ಏನೆಲ್ಲವನ್ನು ನಾವು ಹೇಳಿದ್ದೆವೋ ಅವೆಲ್ಲವೂ, ಪೆರಿಫೆರಲ್ ರಸ್ತೆಯ ನಿರ್ಮಾಣದ ಹೊತ್ತಿಗೇ ಸಾಬೀತಾಗಿ ಹೋಯಿತು.

– ವಾಸು

ಪುರುಷಸೂಕ್ತ ಮತ್ತು ಮನಸ್ಸಿನ ಪ್ರತೀಕ ಚಂದ್ರ

– ವಿನೋಬಾ

ನಮ್ಮ ಜನರಲ್ಲಿ ಸ್ನಾನಮಾಡುವಾಗ ಪುರುಷಸೂಕ್ತವನ್ನು ಪಠಿಸುವ ರೂಢಿ ನಡೆದುಕೊಂಡು ಬಂದಿದೆ.

ಸಹಸ್ರ ಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್

ಸಾವಿರ ತಲೆಯುಳ್ಳವನು, ಸಾವಿರ ಕಣ್ಣುಳ್ಳವನು, ಸಾವಿರ ಕಾಲುಳ್ಳವನು ಈ ಪರಮಾತ್ಮ!...

ಸ್ನಾನದ ಕ್ರಿಯೆಯೊಂದಿಗೆ ಪುರುಷಸೂಕ್ತದ ಏನು ಸಂಬಂಧ? ಯಾವ ವಿರಾಟ್ ಪುರುಷನಿಗೆ ಸಾವಿರ ಕೈಗಳು, ಸಾವಿರ ಕಣ್ಣುಗಳು ಇವೆಯೋ ನನ್ನೀ ಸ್ನಾನದೊಂದಿಗೆ ಅವನ ಸಂಬಂಧ ಏನು? ಸಂಬಂಧವೇನೆಂದರೆ ನೀನು ಯಾವ ಚೊಂಬು ನೀರನ್ನು ತಲೆಯಮೇಲೆ ಹಾಕಿಕೊಳ್ಳುತ್ತೀಯೋ ಅದರಲ್ಲಿ ಸಾವಿರಾರು ಹನಿಗಳಿವೆ. ಆ ಹನಿಗಳು ನಿನ್ನ ತಲೆಯನ್ನು ತೊಳೆಯುತ್ತಿವೆ. ನಿನ್ನನ್ನು ನಿಷ್ಪಾಪನನ್ನಾಗಿ ಮಾಡುತ್ತಿವೆ. ಅಂದರೆ ನಿನ್ನ ತಲೆಯ ಮೇಲೆ ಈಶ್ವರನ ಆಶೀರ್ವಾದ ಸುರಿಯುತ್ತಿದೆ. ಪರಮೇಶ್ವರನ ಸಾವಿರ ಕೈಗಳಿಂದ ಸಾವಿರ ಧಾರೆಗಳೇ ನಿನ್ನ ತಲೆಯ ಮೇಲೆ ಸುರಿಯುತ್ತಿವೆ. ಹನಿಗಳ ರೂಪದಲ್ಲಿ ಪರಮೇಶ್ವರನೇ ನಿನ್ನ ತಲೆಯ ಕೊಳೆಯನ್ನು ತೊಳೆಯುತ್ತಿದ್ದಾನೆ. ಇಂಥ ದಿವ್ಯ ಭಾವನೆಯನ್ನು ಸ್ನಾನದಲ್ಲಿ ಸೇರಿಸಿಕೊಂಡರೆ ಆ ಸ್ನಾನ ಸ್ವಲ್ಪ ಭಿನ್ನವೇ ಆಗುವುದು. ಆ ಸ್ನಾನದಲ್ಲಿ ಅನಂತಶಕ್ತಿ ಬಂದುಬಿಡುವುದು.

ಸಮಾಜವೆಂದರೆ ಒಂದು ಸಹಸ್ರ ಶೀರ್ಷಾಪುರುಷನೆಂದು ವೇದಗಳು ತಿಳಿದಿವೆ. ಅಲ್ಲದೆ ಭಿನ್ನ ಭಿನ್ನ ವರ್ಣಗಳು ಈ ಸಮಾಜಪುರುಷನ ಅವಯವಗಳು. ಸಾವಿರ–ಸಾವಿರ ಕಣ್ಣುಗಳುಳ್ಳ, ಸಾವಿರ–ಸಾವಿರ ಕಾಲುಗಳುಳ್ಳ ಯಾವ ಪರಮಾತ್ಮ ಹಳ್ಳಿಯಲ್ಲಿ ಕಂಡುಬರುತ್ತಾನೋ ಅದು ಪರಮಾತ್ಮನ ಪ್ರಕಟ ಸ್ವರೂಪ. ನಾವು ಅವನ ಉಪಾಸನೆ ಮಾಡುತ್ತೇವೆ. ನಮ್ಮೆದುರಿಗೆ ಸಾವಿರ ರೂಪ ಧರಿಸಿ ಪರಮಾತ್ಮ ನಿಂತಿದ್ದಾನೆ. ಮಿತ್ರನ ರೂಪ ಪಡೆದುಕೊಂಡು ಅವನೇ ಬರುತ್ತಾನೆ, ಶತ್ರು ಆಗಿಯೂ ಕೂಡ ಅವನೇ ಬರುತ್ತಾನೆ. ಒಂದು ವೇಳೆ ನಾವು ಈ ಮೂಲಭೂತ ವಿಷಯಗಳನ್ನು ಮರೆತದ್ದೇ ಆದರೆ ದರ್ಶನವಾಗುವುದಿಲ್ಲ. ಮುಂದೆ ಋಷಿ ಹೀಗೆ ಹೇಳುತ್ತಾರೆ.

ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಶ್ಚ ಪುರುಷಃ
ಪಾದೋಸ್ಯ ವಿಶ್ವ ಭೂತಾನಿ ತ್ರಿಪಾದಸ್ಯಾಮೃತಂ ದಿವಿ

ಇಷ್ಟೊಂದು ಅವನ ಮಹಿಮೆ ಇದೆ. ಆದರೆ ಪುರುಷ ಇವನಿಗಿಂತ ದೊಡ್ಡವ. ನಾಲ್ಕು ಕಾಲುಗಳಲ್ಲಿ ಒಂದು ಕಾಲಿನಲ್ಲಿ ಸೃಷ್ಟಿ ಬಂತು. ನಾಲ್ಕು ಕಾಲುಗಳು ಹೊರಗೆ ಇವೆ. ಎಷ್ಟೊಂದು ವಿಶ್ವದಲ್ಲಿವಿಯೆಯೋ ಅದಕ್ಕಿಂತ ದೊಡ್ಡದು ಹೊರಗಿದೆ.

ಪುರುಷಸೂಕ್ತದ ಹೇಳಿಕೆ ಪ್ರಕಾರ ಇದರಲ್ಲಿ ಕೇವಲ ಈಶ್ವರನ ಮಹಿಮೆಯನ್ನೇ ಹೇಳಲಾಗಿದೆ ಎಂದಲ್ಲ. ಅದರೊಂದಿಗೆ ಅಲ್ಪಪತತೆಯೂ ಇದೆ. ಇದೇ ವಾಸ್ತವಿಕ

ಮಹಿಮೆ. ಖಗೋಳಶಾಸ್ತ್ರದ ಪ್ರಕಾರ ವಿಶ್ವ ಪರ್ರಾದ ಕೋಟಿ ಮೈಲಿ ಹಬ್ಬಿದೆ. ಅದೆಲ್ಲವನ್ನೂ ಪರಮೇಶ್ವರ ವ್ಯಾಪಿಸಿದ್ದಾನೆ. ಆದರೆ ಪರಮೇಶ್ವರನ ನಿಜವಾದ ಮಹಿಮೆ ಅವನ ಅಲ್ಪಪತತೆಯೇ ಆಗಿದೆ. ಜ್ಯಾಯಾನ್ ಅಂದರೆ ದೊಡ್ಡ. ಪುರುಷ ಇದಕ್ಕಿಂತ ದೊಡ್ಡವ. ಈಶ್ವರ ವಿಶ್ವದಿಂದ ಅಲಿಪ್ತ. ಅಲಿಪ್ತತೆಯೇ ಮಹಿಮೆ!

ಪಾದೋಸ್ಯ ವಿಶ್ವ ಭೂತಾನಿ – ಎದುರಿಗೆ ಕಾಣುತ್ತಿರುವ ಈ ಸೃಷ್ಟಿ ಭಗವಂತನ ಚರಣ. ಆದ್ದರಿಂದ ಭಗವತ್ – ಭಕ್ತ ಭಗವಂತನ ಚರಣಗಳ ಸೇವೆಯಲ್ಲಿ ತೊಡಗಿರುತ್ತಾನೆ. ಜನತೆಯ ಸೇವೆ ಮಾಡುತ್ತಾನೆ. ಜನತೆಯ ಸೇವೆಯನ್ನು ಭಗವತ್ ಚರಣ – ಸೇವೆ ಎಂದು ತಿಳಿಯಲಾಗುತ್ತದೆ. ಈ ಪ್ರಕಾರ ಎಲ್ಲ ಭೂತಗಳ ಸೇವೆಯನ್ನು ಪಾದ – ಸೇವಿತ ಭಕ್ತಿಯೆಂದು ಕೂಡ ಹೇಳಬಹುದು. ಈ ದೃಷ್ಟಿ ಬಂದಲ್ಲಿ ಒಂದು ಕ್ಷಣ ಕೂಡ ಭಗವಂತನ ವಿಸ್ಮೃತಿಯಾಗುವುದಿಲ್ಲ.

ಚಂದ್ರಮಾ ಮನಸೋ ಜಾತಃ ಚಕ್ಷೋಃ
ಸೂರ್ಯೋ ಅಜಾಯತ ಮುಖಾದಿಂದ್ರಶ್ಚಾಗ್ನಿಶ್ಚ

ಸೂರ್ಯ, ಅಗ್ನಿ ಕ್ರಮವಾಗಿ ಪ್ರತ್ಯಕ್ಷ ಅನುಮಾನ ಮತ್ತು ಇನ್ನಿತರ ಶಬ್ದಗಳಿಗೆ ಪರ್ಯಾಯವಾಗಿ, ಸೂರ್ಯ ಕಣ್ಣಿನ ದೇವತೆ, ಚಂದ್ರ ಮನಸ್ಸಿನ ದೇವತೆ ಮತ್ತು ಅಗ್ನಿ ವಾಣಿಯ ದೇವತೆ ಎಂದು ತಿಳಿಯಲಾಗಿದೆ. ಚಂದ್ರಮ ಮನಸೋ ಜಾತಃ – ಎಂದು ಋಷಿ ಹೇಳಿದಾಗ ಚಂದ್ರ ಮನಸ್ಸಿನ ಉತ್ಪನ್ನವೆಂದು ಸೂಚಿಸುತ್ತಾರೆ, ಯಾವ ರೀತಿ ಚಂದ್ರನ ಕಲೆಗಳು ಬೆಳೆಯುವುದು – ಕಡಿಮೆಯಾಗುವುದು ಆಗುತ್ತದೋ ಅದೇ ರೀತಿ ಮನಸ್ಸಿನ ಸ್ಥಿತಿ ಇದೆ. ಇಂದಿರುವ ಚಂದ್ರನ ಕಲೆ ನಾಳೆ ಇಲ್ಲ. ನಿತ್ಯ ಬೇರೆ ಲಾವಣ್ಯ ಚಂದ್ರನದು. ಅವನ ಸ್ವರೂಪ ಕ್ಷರ. ಪರಿವರ್ತನ ಶೀಲ. ಆದರೆ ಅವನು ಭಿನ್ನ ಭಿನ್ನ ರೂಪದಲ್ಲಿ ಸಂತೋಷಕೊಡುತ್ತಾನೆ. ಚಂದ್ರ ಎಲ್ಲರನ್ನೂ ಸೆಳೆಯುತ್ತಾನೆ. ಬಾಲಕನನ್ನೂ ಸೆಳೆಯುತ್ತಾನೆ. ಬಾಲಕ ಅವನನ್ನು ಚಂದಮಾಮ ಎಂದು ಅವನೊಂದಿಗೆ ಮಾತನಾಡುತ್ತಾನೆ. ಯಾವ ವಸ್ತುವಿನಲ್ಲಿ ಸ್ವಾಭಾವಿಕ ಆಕರ್ಷಣೆ ಇರುತ್ತದೋ ಆ ವಸ್ತುವಿನಲ್ಲಿ ಅತ್ಯಂತ ಶ್ರೇಷ್ಠ ಕಲೆ ಪ್ರಕಟವಾಗುತ್ತಿರುತ್ತದೆ.

ಚಂದ್ರ ಮತ್ತು ಮನಸ್ಸಿನ ಮಧ್ಯೆ ಆಧ್ಯಾತ್ಮಿಕ ಸಂಬಂಧವಿದೆ. ಯಾರ ದರ್ಶನ, ಸ್ಪರ್ಶನ ಮತ್ತು ಶ್ರವಣದಿಂದ ನಮಗೆ ಆನಂದವಾಗುತ್ತದೋ ಅವನೊಂದಿಗೆ ಆತ್ಮ ಸಂಬಂಧವಿದೆ ಎಂದು ಹೇಳಬಹುದು. ಚಂದ್ರನನ್ನು ನೋಡಿದ ಮೇಲೆ ನಮಗೆ ಆನಂದವಾಗುತ್ತದೆ. ಆನಂದ ಆಧ್ಯಾತ್ಮಿಕ ವಿಷಯ.

ಚಂದ್ರನದು ಇನ್ನೊಂದು ವಿಶೇಷತೆ ಏನೆಂದರೆ, ಸತತವಾಗಿ ಸುತ್ತುತ್ತಾಯಿರುತ್ತಾನೆ. ಇಪ್ಪತ್ತೇಳು ದಿನಗಳು ಇಪ್ಪತ್ತೇಳು ನಕ್ಷತ್ರಗಳೊಂದಿಗೆ ಭೇಟಿ ಮಾಡಲು ಹೋಗುತ್ತಾನೆ. ಚಿಕ್ಕ ದೊಡ್ಡ ಪ್ರಕಾರದ ಎಲ್ಲ ನಕ್ಷತ್ರಗಳೊಂದಿಗೆ ಭೇಟಿಯಾಗುವುದಕ್ಕಾಗಿ ಇಡೀ ಆಕಾಶದಲ್ಲಿ ಪುನಃ ಪುನಃ ಸುತ್ತಾಡುತ್ತಾ ಇರುವ ಈತ ಸೌಮ್ಯ ಸೇವಾ ಮೂರ್ತಿ. ಗುರು, ಶುಕ್ರ, ಶನಿ ಇತ್ಯಾದಿಗಿಂತ ಚಂದ್ರ ಚಿಕ್ಕವ ಆದರೆ ಕಣ್ಣುಗಳಿಗೆ ದೊಡ್ಡವನಾಗಿ ಕಾಣುತ್ತಾನೆ. ಈ ಎಲ್ಲ ನಕ್ಷತ್ರಗಳಿಗಿಂತ ಚಂದ್ರ ಕಣ್ಣುಗಳಿಗೆ ಹೆಚ್ಚು ಆಕರ್ಷಕ ಎಂಬ ಮಾತು ಸ್ಪಷ್ಟವೇ ಇದೆ.

* * *

ಹೆಗ್ಗೋಡಿನ ಸುಬ್ಬಣ್ಣ

– ಯು.ಆರ್.ಅನಂತಮೂರ್ತಿ

ಸುಬ್ಬಣ್ಣನ ಆಯ್ದ ಲೇಖನಗಳ ಆಂಗ್ಲ ಅನುವಾದದ ಕೃತಿಯಾದ 'ಕಮ್ಯೂನಿಟಿ ಅಂಡ್ ಕಲ್ಚರ್'ನ ಬಿಡುಗಡೆಯ ಈ ಸಮಾರಂಭದಲ್ಲಿ ಮಾತನಾಡುವುದು ನನಗೆ ಹೃದಯ ತುಂಬಿಬರುವಂತಹ ಸಂಗತಿಯಾಗಿದೆ. ಸುಬ್ಬಣ್ಣ ನನ್ನ ಪರಮಾಪ್ತ ಮಿತ್ರರಲ್ಲೊಬ್ಬನಾಗಿದ್ದವನು; ನಮ್ಮ ಸಖ್ಯ ಸುಮಾರು ಅರವತ್ತು ವರ್ಷಗಳಷ್ಟು ಸುದೀರ್ಘ ಅವಧಿಯದಾಗಿತ್ತು. ಆ ಸ್ನೇಹ ೧೯೪೮ರಲ್ಲಿ, ನನ್ನ ಶಿವಮೊಗ್ಗೆಯ ದಿನಗಳಲ್ಲಿ ಪ್ರಾರಂಭಗೊಂಡದ್ದು, ಮುಂದೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನಾವಿಬ್ಬರೂ ಸಹಪಾಠಿಗಳಾಗಿದ್ದಾಗ ಇನ್ನಷ್ಟು ಬಲಗೊಂಡಿತು. ಅಲ್ಲಿ ಸುಬ್ಬಣ್ಣ ಕನ್ನಡ ಆನರ್ಸ್ ಓದುತ್ತಿದ್ದ, ನಾನು ಇಂಗ್ಲಿಷ್ ಆನರ್ಸ್ ಓದುತ್ತಿದ್ದೆ. ಪುರೋಹಿತ ಕುಟುಂಬದ ಹಿನ್ನೆಲೆಯಿಂದ ಬಂದಿದ್ದ ನನಗೆ ಹೋಲಿಸಿದರೆ ಅಡಿಕೆ ಬೆಳೆಗಾರರ ಕುಟುಂಬಕ್ಕೆ ಸೇರಿದ ಆತ ಹೆಚ್ಚು ಅನುಕೂಲಸ್ಥನಾಗಿದ್ದ. ಆದರೆ ಅಂತಸ್ತಿನ ಆ ಅಂತರ ನಮ್ಮ ಸ್ನೇಹಕ್ಕೇನೂ ಅಡ್ಡಿಯಾಗಲಿಲ್ಲ. ಯಾಕೆಂದರೆ ಆಗ ನಾವಿಬ್ಬರೂ ಕಮ್ಯೂನಿಸ್ಟರಾಗಿದ್ದೆವು, ಪ್ರತಿಯೊಂದು ವಸ್ತುವನ್ನೂ ಹಂಚಿಕೊಳ್ಳುತ್ತಿದ್ದೆವು. ನಾವು ಒಟ್ಟಿಗೆ ಊಟ ಮಾಡುತ್ತಿದ್ದೆವು, ಒಟ್ಟಿಗೆ ಕಾವ್ಯ ಓದುತ್ತಿದ್ದೆವು, ನಾಟಕ–ಸಿನೆಮಾಗಳಿಗೆ ಒಟ್ಟಿಗೆ ಹೋಗುತ್ತಿದ್ದೆವು. ನನಗೆ ಗೊತ್ತಿರುವ ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯದ ಬಹಳಷ್ಟು ಭಾಗವನ್ನು ನಾನು ಆತನಿಂದಲೆ ಕಲಿತದ್ದು. ಆತ ತನಗೆ ಇಷ್ಟವಾದ ಎಲ್ಲ ಸಾಹಿತ್ಯಕೃತಿಗಳನ್ನೂ ನನ್ನೆದುರು ಓದಿ ಹೇಳುತ್ತಿದ್ದ; ಪಂಪ, ರನ್ನ, ಕುಮಾರವ್ಯಾಸರಾದಿಯಾಗಿ ಅದೆಷ್ಟೋ ಲೇಖಕರನ್ನು ಚರ್ಚಿಸುತ್ತಿದ್ದ. ಅದಕ್ಕೆ ಪ್ರತಿಯಾಗಿ ನಾನು ನನಗಿಷ್ಟರಾದ ಅನೇಕಾನೇಕ ವಿದೇಶಿ ಲೇಖಕರನ್ನು, ಶೇಕ್‌ಸ್ಪಿಯರ್, ಮಿಲ್ಟನ್, ಕೀಟ್ಸ್, ಶೆಲ್ಲಿಯಂಥವರನ್ನು ಆತನ ಬಳಿ ಚರ್ಚಿಸುತ್ತಿದ್ದೆ. ಮುಂದೆ ಪ್ರಗತಿವಾದಿ ಸಾಹಿತ್ಯ ಚಳವಳಿಯ ಪ್ರಭಾವ ಬೆಳೆಯುತ್ತಿದ್ದಂತೆ ಸುಬ್ಬಣ್ಣ ಮ್ಯಾಕ್ಸಿಂ ಗಾರ್ಕಿಯನ್ನು ತುಂಬಾ ಇಷ್ಟಪಡತೊಡಗಿದ. ಆತನಿಗೆ ಗಾರ್ಕಿ ಇಷ್ಟವೆಂದಾಕ್ಷಣ ನಾನೂ ಗಾರ್ಕಿಯನ್ನು ಓದತೊಡಗಿದೆ. ನಮ್ಮ ಆ ಒಡನಾಟ ಅದೆಷ್ಟು ಗಾಢವಾಗಿತ್ತೆಂದರೆ, ನಾವು ಯೋಚಿಸುತ್ತಿದ್ದುದರಲ್ಲಿ ಮಾತನಾಡುತ್ತಿದ್ದರಲ್ಲಿ ಎಷ್ಟು ಅವನದು ಎಷ್ಟು ನನ್ನದು ಎಂದು ಬೇರ್ಪಡಿಸಲೆ ಸಾಧ್ಯವಾಗುತ್ತಿರಲಿಲ್ಲ. ಎಷ್ಟೋ ಬಾರಿ ನಾನು ಏನೋ ಒಂದನ್ನು ಹೇಳುತ್ತಿದ್ದಂತೆಯೆ ಆತ, ಏಯ್, ಅದು ನಾನು ಮೊದಲು ಹೇಳಿದ್ದು, ಎಂದು ನಗುತ್ತ ನುಡಿಯುತ್ತಿದ್ದ. ಇನ್ನು ಕೆಲವೊಮ್ಮೆ ನಾನು ಅದೇ ರೀತಿಯಲ್ಲಿ ಆತ ಹೇಳಿದ್ದರ ಮೇಲೆ ನನ್ನ ಸ್ವಾಮ್ಯವನ್ನು ಸಾಧಿಸುವುದಿತ್ತು. ನಿಜ ನುಡಿಯುವುದಾದರೆ, ನಾನಿಂದು ಎಷ್ಟೇ ಹೆಸರು ಗಳಿಸಿರಲಿ, ಸುಬ್ಬಣ್ಣ ನನಗಿಂತ ಅದೆಷ್ಟೊ ಹೆಚ್ಚು ಮಹತ್ವದ ವ್ಯಕ್ತಿ.

ನಾನು ಮೊದಲಿನಿಂದಲೂ ಹೆಚ್ಚಾಗಿ ಪಶ್ಚಿಮ ನಾಗರಿಕತೆಯ ಪ್ರಭಾವಕ್ಕೆ ಒಳಗಾದವನು, ನನ್ನ ಸಂವೇದನೆಯ ಬಹುಬಾಗ ಪಾಶ್ಚಿಮಾತ್ಯ ಸಾಹಿತ್ಯದಿಂದ ಮತ್ತು

ತತ್ವ-ಸಿದ್ಧಾಂತಗಳಿಂದ ರೂಪುಗೊಂಡದ್ದು. ಅದರೆ ಸುಬ್ಬಣ್ಣ ಯಾವಾಗಲೂ ನಾನು ಪಶ್ಚಿಮದಿಂದ ಪಡೆದು ನುಡಿಯುತ್ತಿದ್ದ ಎಲ್ಲದಕ್ಕೂ ಸಮಾನರೂಪಿಯಾದ ಅನುಭವ, ತತ್ವ ಹಾಗೂ ಸಿದ್ಧಾಂತಗಳನ್ನು ಕನ್ನಡ ಮತ್ತು ಭಾರತೀಯ ಸಂಸ್ಕೃತಿಗಳಲ್ಲಿಯೇ ಗುರುತಿಸಿ ತೋರಿಸುತ್ತಿದ್ದ, ಮಾತ್ರವಲ್ಲ ಅವುಗಳಿಗೆ ಪರ್ಯಾಯರೂಪಗಳನ್ನೂ ಹೆಕ್ಕಿ ಕಾಣಿಸುತ್ತಿದ್ದ. ಹೀಗೆ ಆತ ನನ್ನನ್ನು ಸಮೃದ್ಧಗೊಳಿಸಿದ. ಹಾಗೆ ನಾನು ನನ್ನ ಎಳವೆಯಲ್ಲಿಯೆ ಸುಬ್ಬಣ್ಣನಂತಹ ದೇಸಿ ಪ್ರಜ್ಞೆಯ ಪ್ರಭಾವವಲಯದೊಳಗೆ ಬರದಿದ್ದಲ್ಲಿ ಇಂದು ಪ್ರತಿಷ್ಠಿತ ಶೈಲಿಯ ಆಂಗ್ಲ ಅಧ್ಯಾಪಕನಾಗಿಯಷ್ಟೆ ಉಳಿದುಕೊಂಡಿರುತ್ತಿದ್ದೆ.

ಇಷ್ಟಾಗಿ, ನಾನು ಬರವಣಿಗೆಯನ್ನು ಪ್ರಾರಂಭಿಸಿದ ಹೊಸತರಲ್ಲಿ ಸುಬ್ಬಣ್ಣ ಆಧುನಿಕತೆಗೂ ಹೆಚ್ಚುಹೆಚ್ಚು ತೆರೆದುಕೊಳ್ಳಲಾರಂಭಿಸಿದ. ಆದಾಗ್ಯೂ, ಪಾರಂಪರಿಕ ಹಾಗೂ ಆಧುನಿಕ ಪ್ರಪಂಚಗಳೆರಡರಲ್ಲೂ ಒಟ್ಟೊಟ್ಟಿಗೆ ಜೀವಿಸುವ ಹಾಗೂ ಭಾವಿಸುವ ಅಸಾಧಾರಣವಾದುದೊಂದು ಸಾಮರ್ಥ್ಯ ಆತನಿಗಿತ್ತು. ಕನ್ನಡದಲ್ಲಿ ಬೇರೂರಿ ನಿಂತಂತೆಯೆ ವಿಶ್ವವ್ಯಾಪಿಯಾಗಿಯೂ ಹಬ್ಬಿಬೆಳವ ಶಕ್ತಿ ಆತನಿಗಿತ್ತು. ಆತನಿಗಿದ್ದ ನೆಲೆಗಳಲ್ಲಿ ಕನ್ನಡ ಒಂದಾಗಿದ್ದರೆ ಆತನ ಹಳ್ಳಿ ಹೆಗ್ಗೋಡು ಮತ್ತೊಂದಾಗಿತ್ತು. ಹೆಗ್ಗೋಡು ಆತನಿಗೆ ಬರಿದೆ ಒಂದು ಹಳ್ಳಿಯಾಗದೆ ಕನ್ನಡವಿಶ್ವದ ಅಣುರೂಪವೊಂದಾಗಿತ್ತು. ನಮ್ಮ ಪದವಿ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ನಾನು ಉನ್ನತ ವ್ಯಾಸಂಗ ಪೂರೈಸಿ ಅಧ್ಯಾಪನ ವೃತ್ತಿ ಕೈಗೊಂಡು ನಗರಗಳಲ್ಲಿ ತಿರುಗಿಕೊಂಡಿದ್ದರೆ, ಸುಬ್ಬಣ್ಣ ತನ್ನ ಹಳ್ಳಿಗೆ ಮರಳಿದ. ಅಲ್ಲಿದ್ದ ತನ್ನ ಪೂರ್ವಿಕರು ಮತ್ತು ನೆರೆಹೊರೆಯವರಂತೆಯೆ ಅಡಿಕೆ ಕೃಷಿಯಲ್ಲಿ ಮಗ್ನನಾದ. ಅದರಲ್ಲಿ ಪಡೆದ ವ್ಯಾವಹಾರಿಕ ಯಶಸ್ಸಿನ ದೊಡ್ಡ ಪಾಲೊಂದನ್ನು ಮುಂದೆ ಆತ ತನ್ನ ಕಲೆಯ ಹವ್ಯಾಸಕ್ಕೆಂದು ಮೀಸಲಾಗಿಟ್ಟ. ಹಾಗೆ ಹಳ್ಳಿಯ ಹತ್ತು ಜನರೊಟ್ಟಿಗೆ ಸೇರಿ ಕಟ್ಟಿದ ಪುಟ್ಟ ಸಂಸ್ಥೆಯೊಂದನ್ನು ಮುಂದೆ ಮಹತ್ವದ ಚಳವಳಿಯಾಗಿ ರೂಪಿಸಿದ. ಆತ ಹಾಗೆ ಮಾಡಿದದರಿಂದ ನನ್ನ ವೈಯಕ್ತಿಕ ಸ್ತರದಲ್ಲಿ ಕಳೆದುಹೋಗಬಹುದಾಗಿದ್ದ 'ಹಳ್ಳಿ' ನನಗೆ ಉಳಿಯಿತು.

ಸುಬ್ಬಣ್ಣನ ಇನ್ನೊಂದು ಭಾಗ್ಯವೆಂದರೆ, ಆತನ ಕುಟುಂಬದ ಸದಸ್ಯರೆಲ್ಲ ಆತನ ಆಶಯಗಳಿಗೆ ಆಧಾರವಾಗಿ ನಿಂತರು, ಅವುಗಳನ್ನು ಮುಂದುವರೆಸಿಕೊಂಡು ಬಂದರು. ಇದು ನಮ್ಮ ಪ್ರಸ್ತುತ ಸನ್ನಿವೇಶದಲ್ಲಿ ತುಂಬಾ ಗಮನಾರ್ಹವಾದುದು. ಇಂದು ನಾವು ಬಹಳಷ್ಟು ಜನ ತಾಯಿತಂದೆಯರು ನಮ್ಮ ಮಕ್ಕಳನ್ನು ಅಮೇರಿಕಾಕ್ಕೊ ಯುರೋಪಿಗೊ ಕಳೆದುಕೊಳ್ಳುತ್ತಿದ್ದೇವೆ. ಇಂದು ಮಲೆನಾಡಿನಲ್ಲಿ ಒಬ್ಬಾನೊಬ್ಬ ಯುವಕನೂ ಇಲ್ಲದಿರುವಂತಹ ಹಳ್ಳಿಗಳು ಅನೇಕವಿವೆ. ಅಲ್ಲಿ ಹುಟ್ಟಿಬೆಳೆದ ಎಲ್ಲ ಯುವಕರೂ ಈಗ ದೇಶವಿದೇಶಗಳ ನಗರಗಳಿಗೆ ವಲಸೆ ಹೋಗಿದ್ದಾರೆ. ಆದರೆ ಸುಬ್ಬಣ್ಣನ ಮಗ ಅಕ್ಷರ ತಂದೆಯ ಮಾದರಿಯನ್ನೇ ಅನುಸರಿಸಿ, ನಗರಗಳಲ್ಲಿ ಉನ್ನತ ವ್ಯಾಸಂಗ ಪಡೆದೂ ಕೊನೆತೆ ತನ್ನ ಹಳ್ಳಿಗೇ ಮರಳಿದ್ದಾನೆ, ತಂದೆಯ ಚಟುವಟಿಕೆಗಳನ್ನು ತನ್ನದೇ ವೈಶಿಷ್ಟ್ಯಪೂರ್ಣ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಕುಟುಂಬ-ಊರು-ಸಮುದಾಯಗಳಿಗೆ ಸಂಬಂಧಿಸಿದ ಈ ಅಂಶಗಳೆಲ್ಲ ಸೇರಿ, ಇಂದು ನೀನಾಸಂನನ್ನು ಇಡಿ ಏಶಿಯಾದಲ್ಲೆ ಅತ್ಯಂತ ಅನನ್ಯವಾದ ಸಂಸ್ಥೆಯೊಂದಾಗಿ ಬೆಳೆಸಿ ನಿಲ್ಲಿಸಿವೆ.

ನನಗೂ ಸುಬ್ಬಣ್ಣನಿಗೂ ಹಲವಾರು ಅಭಿಪ್ರಾಯಭೇದಗಳಿದ್ದವು. ನಮ್ಮಿಬ್ಬರ ಸಂಬಂಧವೇ ಹಾಗಿತ್ತು. ನಾನು ಕೆಲವೊಮ್ಮೆ ತೀವ್ರವೂ ಅತಿನಿಷ್ಠುರವೂ ಆದ ನಿಲುವುಗಳನ್ನು ತೆಗೆದುಕೊಳ್ಳುವವನು. ನಾನು ಹಾಗೆ ಮಾಡಿದಾಕ್ಷಣ ಸುಬ್ಬಣ್ಣ ಅಷ್ಟೆ ತೀವ್ರವಾದ ಆದರೆ ನನಗೆ ವಿಧ್ರುವದೂರದ ನಿಲುವಗಳನ್ನು ತಳೆಯುತ್ತಿದ್ದ. ಹಾಗೆ ನಡೆದಾಗಲೆಲ್ಲ, ಸತ್ಯವೆನ್ನುವುದು ಒಂದು ತುದಿಯಲ್ಲಿ ಇರುವುದಲ್ಲ, ಅದು ಇರುವುದು ಕೊನೆಗೂ ಎರಡು ತುದಿಗಳ ನಡುವೆ ಎಲ್ಲೋ ಒಂದೆಡೆ ಎಂಬುದನ್ನು ಆತ ನನಗೆ ತೋರಿಸಿಕೊಡುತ್ತಿದ್ದ. ನನ್ನ ನಿಲುವಗಳ ಬಗ್ಗೆ ನನಗೆಯ ಸಂದೇಹ ಮೂಡುವಂತೆ ಆತ ನಡೆದುಕೊಳ್ಳುತ್ತಿದ್ದ. ಇದು ತೋರುವಂತೆ, ಆತ ಎಂದೂ ಆತ್ಮಪ್ರತ್ಯಯದ ವ್ಯಕ್ತಿಯಾಗಿರಲಿಲ್ಲ. ಇದೇ ರೀತಿಯಲ್ಲಿ ಆತ ಎಷ್ಟೋ ಬಾರಿ ಭಾವತೀವ್ರತೆಯನ್ನೂ ಉಗ್ರತತ್ವನಿಷ್ಠೆಯನ್ನೂ ತೋರುವುದಿತ್ತು. ನಾನೇ ಕೆಲವೊಮ್ಮೆ ಕಂಡಂತೆ ಆತ ಸಾತ್ವಿಕಕ್ರೋಧದಲ್ಲಿ ಕೆರಳಿ ಎದುರಾಳಿಗಳಿಗೆ ಎದೆಯೊಡ್ಡಿ ನಿಂತದ್ದೂ ಇತ್ತು. ಉಡುಪಿಯಲ್ಲೊಮ್ಮೆ ರಾಷ್ಟ್ರೀಯಮಟ್ಟದ ನಾಟಕೋತ್ಸವ ಹಾಗೂ ವಿಚಾರಸಂಕಿರವೊಂದು ನಡೆಯುತ್ತಿದ್ದಾಗ ಅಲ್ಲಿ ಪ್ರದರ್ಶನಗೊಂಡ ನಾಟಕವೊಂದರ ಸಣ್ಣ ವಿವರವೊಂದರ ಬಗ್ಗೆ ಅಲ್ಪಮತಿಯ ಹುಯಿಲೆಬ್ಬಿಸಿದ ಸಂಘಪರಿವಾರದವರ ವಿರುದ್ಧ ಆತ ತತ್‌ಕ್ಷಣಸ್ಪಂದಿಯಾಗಿಯೂ ಏಕಾಂಕವೀರನೆಂಬಂತೆಯೂ ಸಿಡಿದೆದ್ದದ್ದು, ಮುಂದೆ ಅಲ್ಲಿ ನೆರದಿದ್ದ ಲೇಖಕರು ಮತ್ತು ಕಲಾವಿದರೆಲ್ಲರೂ ಒಟ್ಟುಗೂಡಿ ಪ್ರತಿಭಟಿಸುವಂತೆ ಸ್ಫೂರ್ತಿ ನೀಡಿದ್ದು ಇದಕ್ಕೊಂದು ಜ್ವಲಂತವಾದ ನಿದರ್ಶನವಾಗಿದೆ.

ಸಬ್ಬಣ್ಣನ ವ್ಯಕ್ತಿತ್ವದಂತೆಯೆ ಆತನ ಬರವಣಿಗೆಯೂ ಅತ್ಯಂತ ಮಹತ್ವದ್ದು. ಅದರಲ್ಲೂ ವಿಶೇಷವಾಗಿ ಒಂದು ಸಾವಿರ ವರ್ಷಗಳ ಹಿಂದಿನ ಕನ್ನಡ ಕೃತಿ 'ಕವಿರಾಜಮಾರ್ಗ'ದ ಬಗ್ಗೆ ಆತ ಬರೆದ 'ಕವಿರಾಜಮಾರ್ಗ ಮತ್ತು ಕನ್ನಡಜಗತ್ತು' ಪುಸ್ತಕವಂತೂ ಒಂದು ಮಹತ್ ಕೃತಿಯೇ ಹೌದು. ನಾನು ಓದಿ ಮತ್ತು ಕೇಳಿಬಲ್ಲಂತೆ 'ಕವಿರಾಜಮಾರ್ಗ' ಇಡಿಯ ವಿಶ್ವಚರಿತ್ರೆಯಲ್ಲಿಯೆ ಅನನ್ಯವಾದೊಂದು ಕೃತಿ. ಅದನ್ನು ಕೆಲವರು ಇಟಲಿಯ ಮಹಾಕವಿ ಡಾಂಟೆಯ ಕೃತಿಗೆ ಹೋಲಿಸುತ್ತಾರಾದರೂ ಅದು ಡಾಂಟೆಗಿಂತ ಹಲವು ಶತಮಾನಗಳಷ್ಟು ಪೂರ್ವದಲ್ಲಿಯೇ ರಚನೆಯಾದುದೆಂದು ಮರೆಯುವಂತಿಲ್ಲ. ಡಾಂಟೆ ತನ್ನ ಕಾಲದ ಕ್ಲಾಸಿಕಲ್ ಭಾಷೆಯಾದ ಲ್ಯಾಟಿನ್ ಅನ್ನು ಬಿಟ್ಟು ತನ್ನ ಸಮಕಾಲೀನ ದೇಸಿ ಭಾಷೆಯಾದ ಇಟಾಲಿಯನ್‌ನಲ್ಲಿ ಬರೆಯಬೇಕೆಂದು ನಿರ್ಧರಿಸಿದ್ದು ಕವಿರಾಜಮಾರ್ಗಕಾರ ಸಂಸ್ಕೃತ ಮತ್ತು ಕನ್ನಡಗಳ ನಡುವೆ ಮಾಡಿಕೊಂಡ ಆಯ್ಕೆಯನ್ನೆ ಹೋಲುವಂಥದ್ದು. ಆದರೆ ಕವಿರಾಜಮಾರ್ಗಕಾರ ಆ ನಿರ್ಧಾರಗೈದದ್ದು ಡಾಂಟೆಗಿಂತ ಎಷ್ಟೋ ಮೊದಲೆ. ಇದೇ ರೀತಿಯ ಉದಾಹರಣೆ ತಮಿಳು ಭಾಷೆಯ ಚರಿತ್ರೆಯಲ್ಲೂ ಕಾಣಸಿಗುತ್ತದೆಂಬುದನ್ನು ನಾವು ಇಲ್ಲಿ ನೆನೆಯಬಹುದು. ಅಭಿವ್ಯಕ್ತಿಯ ಭಾಷೆಯ ಆಯ್ಕೆಯ ಮಟ್ಟಿಗೆ ಹೋಲಿಕೆಯಿದ್ದರೂ 'ಕವಿರಾಜಮಾರ್ಗ' ತನಗೆ ಸಮಾನಾಂತರವಾದ ಇಟಾಲಿಯನ್ ಮತ್ತು ತಮಿಳು ಉದಾಹರಣೆಗಳಿಗಿಂತ ಭಿನ್ನವಾದುದು, ಅನನ್ಯವಾದುದು. 'ಕವಿರಾಜಮಾರ್ಗ' ತನ್ನ ಸೃಷ್ಟಿಯ ಕಾಲ-ಸಂದರ್ಭಗಳಲ್ಲಿ ಪಡೆದಿದ್ದ ಮಹತ್ವವನ್ನೂ ಹಾಗೆಯೇ ಅದಕ್ಕೆ

ನಮ್ಮ ಕಾಲ-ಸಂದರ್ಭಗಳಲ್ಲಿರುವ ಮಹತ್ವವನ್ನೂ ಆಳವಾಗಿ ಅರಿತಿದ್ದ ಕೆಲವೇ ವ್ಯಕ್ತಿಗಳಲ್ಲಿ ಸುಬ್ಬಣ್ಣ ಒಬ್ಬನಾಗಿದ್ದ. 'ಕವಿರಾಜಮಾರ್ಗ'ದ ಒಂದು ವೈಶಿಷ್ಟ್ಯವೆಂದರೆ ಅದು ಕನ್ನಡದ ಬಗ್ಗೆ ಅಗಾಧವಾದದ ಆತ್ಮವಿಶ್ವಾಸದಲ್ಲಿ ಮಾತನಾಡುತ್ತಿರವಾಗಲೂ ಲವಲೇಶದಷ್ಟೂ ಅಂಧಶ್ರದ್ಧೆಯನ್ನು ತೋರುವುದಿಲ್ಲ. ಬದಲಿಗೆ, ವ್ಯಕ್ತಿಗಳು ಮತ್ತು ಸಮುದಾಯಗಳು ತಮ್ಮತಮ್ಮ ಭಾಷೆಯನ್ನು ಪ್ರೀತಿಸುವಷ್ಟೆ ಆಳವಾಗಿ ಅನ್ಯಭಾಷೆಗಳನ್ನೂ ಪ್ರೀತಿಸಬಹುದೆಂಬುದನ್ನು ಅದು ತೋರಿಸಿಕೊಡುತ್ತದೆ. ಅಂತಹ ಆತ್ಮಗೌರವ ಮತ್ತು ಅನ್ಯಪ್ರೇಮಗಳೆರಡೂ ಬೆಸೆದುಕೊಂಡ ಮಾರ್ಗದ ಮುಖಾಂತರವಷ್ಟೆ ನಾವು ನಮ್ಮ ನಮ್ಮ ಭಾಷೆಗಳನ್ನು ಸಮೃದ್ಧಗೊಳಿಸಿಕೊಳ್ಳುವುದು ಸಾಧ್ಯವೆಂಬುದನ್ನು ಅದು ಸೂಚಿಸುತ್ತದೆ. ಶಿವಸೇನೆ ಮಾದರಿಯ ಭಾಷಾದುರಭಿಮಾನದ ಚಳವಳಿಗಳು ಎಲ್ಲೆಡೆಯೂ ಬೆಳೆಯುತ್ತಿರುವ ನಮ್ಮ ಪ್ರಸ್ತುತ ಸನ್ನಿವೇಶದಲ್ಲಿ ಸುಬ್ಬಣ್ಣ 'ಕವಿರಾಜಮಾರ್ಗದ' ಈ ಸತ್ವಸತ್ಯವನ್ನು ಮರುಕಾಣಿಸಿಕೊಟ್ಟದ್ದು ಆತ ಕನ್ನಡ ಸಂಸ್ಕೃತಿಗೆ ನೀಡಿದ ಅಮೂಲ್ಯ ಕೊಡುಗೆಯೆ ಹೌದು.

ಹೀಗೆ ಒಂದೆಡೆ ತನ್ನ ಸ್ವಂತದ ನೆಲದಲ್ಲಿ ನೆಲೆಯೂರಿ ನಿಂತಿದ್ದು ಇನ್ನೊಂದೆಡೆ ಅನ್ಯರಲ್ಲಿನ ಶ್ರೇಷ್ಠ ಅಂಶಗಳನ್ನು ಗುರುತಿಸುವ ಹಾಗೂ ಸ್ವೀಕರಿಸುವ ಸುಬ್ಬಣ್ಣನ ವಿಶಿಷ್ಟ ಗುಣ ಆತನ ಎಳೆಯ ವಯಸ್ಸಿನಲ್ಲಿಯೆ ಪ್ರಕಟಗೊಂಡಿತ್ತು. ಆತನಿಗೆ ಕನ್ನಡದ ಎಲ್ಲ ಕಾಲಘಟ್ಟಗಳ ಸಾಹಿತ್ಯಕೃತಿಗಳ ಪರಿಚಯವಿತ್ತು, ಇಂಗ್ಲಿಷಿನ ಮೂಲಕ ಭಾರತೀಯ ಅಭಿಜಾತ ಸಾಹಿತ್ಯದ ಪರಿಚಯವೂ ಇತ್ತು. (ಆತನಿಗಿದ್ದ ಸಂಸ್ಕೃತ ಪ್ರೀತಿಯ ಬಗ್ಗೆ ನನ್ನಲ್ಲಿ ಕೆಲವು ಪ್ರಶ್ನೆಗಳಿದ್ದವು, ಆದರೆ ಅದರಿಂದ ಮುಂದೆ ನಾನು ಎಷ್ಟೊ ಮಹತ್ವದ ಸಂಗತಿಗಳನ್ನು ಕಲಿತೆನೆಂಬುದನ್ನೂ ಇಲ್ಲಿ ಒಪ್ಪಿಕೊಳ್ಳಲೇಬೇಕು) ಆತ ಇನ್ನೂ ಕನ್ನಡ ಆನರ್ಸ್ ವಿದ್ಯಾರ್ಥಿಯಾಗಿದ್ದಾಗಲೆ ಸಂಸ್ಕೃತ ಭಾಷೆಯ ಅಭಿಜಾತ ಕೃತಿಯಾದ ಧನಂಜಯನ 'ದಶರೂಪಕ'ವನ್ನು ಕನ್ನಡಕ್ಕೆ ಅನುವಾದಿಸಿದ್ದ. ಆ ಅನುವಾದ ಆತನ ಗುರುಗಳಾಗಿದ್ದ ಕುವೆಂಪುರವರಿಗೆ ಎಷ್ಟು ಇಷ್ಟವಾಗಿತ್ತೆಂದರೆ ಅವರು ಆ ಕೃತಿಯನ್ನು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೊಂದಕ್ಕೆ ಶಿಫಾರಸು ಮಾಡಿದ್ದರು. ವಿದ್ಯಾರ್ಥಿ ದೆಸೆಯಿಂದಲೆ ಹೀಗೆ ಬರವಣಿಗೆಯಲ್ಲಿ ತೊಡಗಿದ ಸುಬ್ಬಣ್ಣ ಮುಂದೆ ಗದ್ಯ, ಪದ್ಯ, ನಾಟಕ ಇತ್ಯಾದಿಗಳ ರಚನೆಯನ್ನೂ ಅನುವಾದಕಾರ್ಯಗಳನ್ನು ಕೈಗೊಂಡ. ಜ್ಞಾನಜಗತ್ತು ಮತ್ತು ಕಲಾಜಗತ್ತುಗಳಲ್ಲಿ ತನಗೆ ಅತ್ಯುತ್ಕೃಷ್ಟವೆಂದು ಕಂಡದ್ದನ್ನು ತಾನಷ್ಟೆ ಆಸ್ವಾದಿಸುವುದರಲ್ಲಿ ತೃಪ್ತಿಪಡದೆ ಆತ ಅವುಗಳನ್ನು ತನ್ನ ಪರಿಸರದ ಸಂಗಾತಿಗಳೊಂದಿಗೆ ಹಂಚಿಕೊಳ್ಳತೊಡಗಿದ. ಆತ ಏನು ಕೆಲಸ ಮಾಡಿದರೂ ಅದು ಮೂಲತಃ ಆತನ ಹಳ್ಳಿಗರಿಗಾಗಿ ಆಗಿತ್ತು, ಆ ಹಳ್ಳಿಗರೊಡನೆ ಕೂಡಿ ಮಾಡಿದುದಾಗಿತ್ತು ಹಾಗೂ ಆ ಹಳ್ಳಿಗರ ಮೂಲಕವೆ ಆಗಿತ್ತು. ಆತ ತಾನು ತಿಳಿದುದೆಲ್ಲವನ್ನೂ ಪ್ರೀತಿಸಿದೆಲ್ಲವನ್ನೂ ಒಂದು ಸರ್ಕಾರಿ ವ್ಯವಸ್ಥೆಯಾಗಲಿ, ಸಾಂಪ್ರದಾಯಿಕ ಶೈಕ್ಷಣಿಕ ಸಂಸ್ಥೆಗಳಾಗಲಿ ಎಷ್ಟು ಹಣ ಖರ್ಚು ಮಾಡಿಯೂ ಸಾಧಿಸದಂತಹ ವಿಶಿಷ್ಟವಾದ ಸಾಂಸ್ಕೃತಿಕ ವಿಶ್ವವೊಂದನ್ನು ತನ್ನ ಪುಟ್ಟ ಹಳ್ಳಿಯಲ್ಲಿ ಸೃಷ್ಟಿಸಿದ. ಇಲ್ಲಿ ಈ ಸಭೆಯಲ್ಲಿ ನಮ್ಮೊಂದಿಗಿರುವ ಆಶೀಶ್ ನಂದಿ, ರಾಮಚಂದ್ರ ಗುಹಾ, ಚಂದ್ರಶೇಖರ ಕಂಬಾರ, ಅಂಥವರೆಲ್ಲ ಆ ವಿಶ್ವದ ಭಾಗವಾಗಿ ಸೇರಿಕೊಂಡಡು, ಅದನ್ನು ಇನ್ನಷ್ಟು ಶ್ರೀಮಂತಗೊಳಿಸುವತ್ತ ತಮ್ಮ

ಕೊಡುಗೆಗಳನ್ನು ನೀಡಿದರು. ಹಾಗೆ ನೋಡಿದರೆ, ಇಂದು ನನಗೆ ಗೊತ್ತಿರುವ ಬಹುಮುಖ್ಯ ಭಾರತೀಯ ಬರಹಗಾರರು, ಕಲಾವಿದರು, ಹಾಗೂ ಚಿಂತಕರಲ್ಲಿ ಬಹಳಷ್ಟು ಜನ ಸುಬ್ಬಣ್ಣನ ಪ್ರಭಾವಲಯದಿಂದ ಪಡೆದುಕೊಂಡಿದ್ದಾರೆ, ಅದಕ್ಕೆ ಒಂದಿಷ್ಟು ನೀಡಿದ್ದಾರೆ.

ಇಷ್ಟಾಗಿಯೂ ಸುಬ್ಬಣ್ಣನಿಗೆ ಅನ್ಯಮೂಲಗಳಿಂದ ಬಂದದ್ದು ತಂದದ್ದು ಎಲ್ಲವೂ ಎಲ್ಲಕಿಂತ ಮೊದಲಾಗಿ ಮತ್ತು ಮಿಗಿಲಾಗಿ ತನ್ನ ಸ್ವಂತ ಪರಿಸರಕ್ಕೆ ಪ್ರಸ್ತುತವಾಗಿರಬೇಕು ಹಾಗೂ ಆ ಪರಿಸರದಲ್ಲಿ ನಿಜವಾಗಬೇಕು ಎಂಬ ಹಠವೂ ಬಲವಾಗಿತ್ತು. ಆತ ಸರ್ವಪ್ರಥಮವಾಗಿಯೂ ಮತ್ತು ಅಂತಿಮವಾಗಿಯೂ ತನ್ನ ಭವ-ಭಾವದ ಮೂಲನೆಲೆಗಳಿಗೆಯೆ ಬದ್ಧನಾಗಿದ್ದ. ಆತ ಯಾವತ್ತೂ 'ನಾನು ಬರೆದದ್ದು ಮಾಡಿದ್ದು ನನ್ನ ಪರಿಸರದ ಜನರಿಗೆ ಅರ್ಥವಾದರೆ ಸಾಕು, ಅವರಿಗೆ ಇಷ್ಟವಾದರೆ ಸಾಕು, ಅದು ಇನ್ಯಾರೋ ಪರಭಾಷೆಯವರಿಗೆ ಅರ್ಥವಾಗುವುದೋ ಇಲ್ಲವೋ ಎಂಬುದರ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಬೇಕು? ಎನ್ನುತ್ತಿದ್ದವನು; ಹಾಗೆಯೆ, 'ಇಂಗ್ಲಿಷ್ ಭಾಷಿಕರಿಗೆ ತಿಳಿಯದಿದ್ದರೂ ನಡೆಯುತ್ತದೆ ಎಂಬ ಭಾವದಲ್ಲಿ ನಿನನ್ದೆ ಭಾಷೆಯಲ್ಲಿ ಬರೆದಾಗ ಮಾತ್ರ ನೀನು ಅವರು ತಾವು ತಿಳಿಯಲೇಬೇಕು ಎಂದು ಹಂಬಲಿಸುವಂಥದನ್ನು ಬರೆಯಬಲ್ಲೆ, ಅದೇ, ಅವರಿಗೆ ತಿಳಿಸಲೇಬೇಕು ಎಂಬ ಆಸೆಯಲ್ಲಿ ಬರೆದಾಗ ಅವರು ತಾವಾಗಿಯೆ ತಿಳಿಯಲು ಹಾತೊರೆಯುವಂತಹ ಏನನ್ನೂ ನೀನು ಬರೆಯಲಾರೆ' ಎಂದೂ ಹೇಳುತ್ತಿದ್ದವನು.

ಇದೆಲ್ಲದರ ಮುಖಾಂತರ ಸುಬ್ಬಣ್ಣ ತನ್ನ ಇನ್ನೊಂದು ಸ್ಫೂರ್ತಿಮೂಲವಾದ ಗಾಂಧಿಗೆ ಹೆಚ್ಚುಹೆಚ್ಚು ಹತ್ತಿರ ಚಲಿಸಿದ. ಆ ಚಲನೆ ಅಕ್ಷರಶಃ ಅರ್ಥದಕ್ಕಿಂತ ಹೆಚ್ಚಾಗಿ ತಾತ್ವಿಕ ಅರ್ಥದ ಚಲನೆಯಾಗಿತ್ತು. ಗಾಂಧೀ ಕನಸಿದ ಬಗೆಯ ವಿಕೇಂದ್ರಕರಣವೆನ್ನುವುದು ಸುಬ್ಬಣ್ಣನಿಗೆ ಅತ್ಯಂತ ದೊಡ್ಡ ಮೌಲ್ಯವಾಗಿತ್ತು. ಮಾನವರು ತಮ್ಮತಮ್ಮ ಪುಟ್ಟ ಊರುಗಳನ್ನೆ ವಿರಾಟ್‌ವಿಶ್ವಗಳನ್ನಾಗಿ ಕಟ್ಟಿಕೊಳ್ಳುವ ಜೀವನಮಾದರಿ ಆತನಿಗೆ ಅತ್ಯಂತ ಪ್ರಿಯವಾದುದಾಗಿತ್ತು. ಇದರ ಜೊತೆಗೆಯೆ, ಊರು-ಸಮುದಾಯಗಳಿಗಿಂತ ವಿಸ್ತಾರವೂ ಬೃಹತ್ತೂ ಆದ ರಾಜ್ಯ ಮತ್ತು ರಾಷ್ಟ್ರ ಪ್ರಭುತ್ವಗಳ ಸಂರಚನೆ ಹಾಗೂ ಅವುಗಳ ಗುಣಲಕ್ಷಣಗಳ ಬಗ್ಗೆಯೂ ಆತನಿಗೆ ಅತೀವವಾದ ಕುತೂಹಲವಿತ್ತು. ಕಾಳಿದಾಸನ 'ಅಭಿಜ್ಞಾನಶಾಕುಂತಲ'ವನ್ನು ಆತ 'ಲೋಕಶಾಕುಂತಲ'ವಾಗಿ ರೂಪಾಂತರಿಸಿದ ರೀತಿಯೆ ಆತನಿಗೆ ಕೇಂದ್ರೀಕೃತ ವ್ಯವಸ್ಥೆಯ ಬಗೆಗಿದ್ದ ಕುತೂಹಲವನ್ನೂ ವಿಕೇಂದ್ರೀಕರಣದ ಬಗೆಗಿದ್ದ ಒಲವನ್ನೂ ಒಟ್ಟೊಟ್ಟಿಗೆ ತೋರುತ್ತದೆ. ಸುಬ್ಬಣ್ಣನಿಗೆ ವಿಕೇಂದ್ರಿಕರಣವೆನ್ನುವುದು ಬರಿದೆ ರಾಜಕೀಯ ಚಟುವಟಿಕೆಯಾಗಿರದೆ ಸಂಸ್ಕೃತಿಸ್ತರದ ಕಾರ್ಯಕ್ರಮವೂ ಆಗಿತ್ತು. ಹಾಗೆಂದೆ ಆತ ತಾನು ಇಷ್ಟಪಟ್ಟ ಜಗತ್ತಿನ ಅನ್ಯಸಂಸ್ಕೃತಿಗಳ ಚಿಂತನೆ ಮತ್ತು ಕೃತಿಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ನಡೆಸಿದ, ಅನುವಾದಗಳ ಮೂಲಕ ಕನ್ನಡದ ಪ್ರಜ್ಞೆಯನ್ನು ಇನ್ನಷ್ಟು ವಿಸ್ತರಿಸಲು ಯತ್ನಿಸಿದ. ಇಲ್ಲಿರುವ ಆಶಿಶ್ ನಂದಿ, ರಾಮಚಂದ್ರ ಗುಹಾ ಅಂಥವರೆಲ್ಲಾ ಕನ್ನಡಕ್ಕೆ ಪರಿಚಯವಾಗಿದ್ದೆ ಸುಬ್ಬಣ್ಣನ ಹಾಗೂ ಆತನ ತಂಡದವರ ಇಂತಹ ಭಾಷಾಂತರದ ಕ್ರಿಯೆಯಿಂದ.

ಮನೋಧರ್ಮದ ವಿಷಯದಲ್ಲಿ ಸುಬ್ಬಣ್ಣನನ್ನು ಯಾರೊಡನಾದರೂ ಹೋಲಿಸಬಹುದಾದರೆ ಅದು ಈಶ್ವರಚಂದ್ರ ವಿದ್ಯಾಸಾಗರರ ಜೊತೆಗೆ ಎಂದು ನನಗನಿಸುತ್ತದೆ. ಆಶಿಶ್ ನಂದಿ ಒಂದೆಡೆ ವಿದ್ಯಾಸಾಗರರ ಬಗ್ಗೆ ಬರೆಯುತ್ತ ಅವರನ್ನು 'ವಿಮರ್ಶಾಶೀಲ ಸಂಪ್ರದಾಯವಾದಿ' ಎಂದು ಕರೆಯುತ್ತಾರೆ. ನಾನು ವಿದ್ಯಾಸಾಗರರಂಥವರನ್ನು 'ಆಂತರಿಕ ವಿಮರ್ಶಕರು' (ಕ್ರಿಟಿಕಲ್ ಇನ್‌ಸೈಡರ್ಸ್) ಎಂದು ಕರೆದಿದ್ದೇನೆ. ವಿದ್ಯಾಸಾಗರರು ಭಾರತೀಯ ಸಂಪ್ರದಾಯವನ್ನು ಸಾರಾಸಗಟಾಗಿ ಸ್ತುತಿಸಲಿಲ್ಲ, ಹಾಗೆಯೆ ಆಧುನಿಕ ಪಶ್ಚಿಮವನ್ನು ಇಡಿಯಾಗಿ ತಿರಸ್ಕರಿಸಲಿಲ್ಲ. ಅವರು ಪಶ್ಚಿಮಕ್ಕೆ ಮುಖಾಮುಖಿಯಾದರು, ಅದರಲ್ಲಿನ ಇತ್ಯಾತ್ಮಕ ಅಂಶಗಳನ್ನು ಗುರುತಿಸಿದರು, ಹಾಗೆ ಮಾಡುತ್ತಲೆ ತಮ್ಮ ಮೂಲ ಸಂಸ್ಕೃತಿಯಲ್ಲಿ ಅವುಗಳನ್ನು ಹೋಲುವಂತಿದ್ದ ಅಂಶಗಳನ್ನು ಹೆಕ್ಕಿ ತೆಗೆದರು. ತನ್ಮೂಲಕ ಪೂರ್ವ-ಪಶ್ಚಿಮಗಳ ನಡುವೆ, ಪರಂಪರೆ-ಆಧುನಿಕತೆಗಳ ನಡುವೆ, ಸ್ವ-ಅನ್ಯಗಳ ನಡುವೆ ಸಮನ್ವಯ ಸಾಧಿಸುವ ಅನನ್ಯ ದಾರಿಯೊಂದನ್ನು ಅವರು ಕಾಣಿಸಿಕೊಟ್ಟರು. ನಂದಿ ಉಲ್ಲೇಖಿಸಿರುವ ಪ್ರಖ್ಯಾತ ನಿದರ್ಶನವೊಂದರಲ್ಲಿ ಅವರು ಪುರಾತನ ಸ್ಮೃತಿಗಳನ್ನು ತಮ್ಮ ವಾದದ ಆಧಾರವಾಗಿ ಬಳಸಿಕೊಂಡರು, ಆದರೆ ಅಲ್ಲಿ ಮನುಸ್ಮೃತಿಗಿಂತ ಭಿನ್ನವಾದ ಪರಾಶರಸ್ಮೃತಿಯನ್ನು ಬಳಸಿಕೊಂಡರು. ಪರಂಪರೆಯನ್ನು ಹೀಗೆ ಮುಕ್ತದೃಷ್ಟಿಯಿಂದಲೂ ಉದಾರ ಮಾನವತಾಭಾವದಿಂದಲೂ ಮರುವ್ಯಾಖ್ಯಾನ ಮಡಿದುದಕ್ಕೆ ವಿದ್ಯಾಸಾಗರ ತಮ್ಮ ಕಾಲದ ಸಂಪ್ರದಾಯಶರರಿಂದ ಎಂತಹ ಅಪಾಯವನ್ನು ಎದುರಿಸಬೇಕಾಯಿತೆಂದರೆ ಕೆಲವೊಮ್ಮೆ ಅವರ ಮನೆಯ ಸುತ್ತ ಪೋಲಿಸ್ ಕಾವಲು ಹಾಕಬೇಕಾಗುತ್ತಿತ್ತು. ನಾನು ಒಂದೆಡೆ ಓದಿರುವಂತೆ, ಆತನ ತಾಯಿ ಆತ ಮನುವಿನ ಬಗ್ಗೆ ಟೀಕೆಯನ್ನು ಬರೆಯಬೇಕೆಂದು ಅಪೇಕ್ಷಿಸಿದಳಂತೆ. ಹಾಗೆ ಬರೆದ ವಿಮರ್ಶೆ ತನ್ನ ಕೆಲವು ಹಿರಿಯರಿಗೆ ಅಪ್ರಿಯವಾಗಬಹುದೆಂದೂ ತನ್ನ ಕುಟುಂಬವನ್ನು ತೊಂದರೆಗೆ ಈಡು ಮಾಡಬಹುದೆಂದೂ ಮುಂಚಿತವಾಗಿಯೆ ಕಂಡ ವಿದ್ಯಾಸಾಗರರು ಆ ಬರವಣಿಗೆಗೆ ಸಂಬಂಧಿಸಿ ತನ್ನ ಸಂಪ್ರದಾಯಸ್ಥ ತಂದೆಯ ಅಪ್ಪಣೆಯನ್ನು ಕೇಳಲು ಹೋದರಂತೆ. ತಂದೆ 'ಒಂದೊಮ್ಮೆ ನಾನು ಒಪ್ಪಿಗೆ ನೀಡದಿದ್ದರೆ ಏನು ಮಾಡುತ್ತಿ? ಎಂದು ಕೇಳಿದರಂತೆ. ಅದಕ್ಕೆ ವಿದ್ಯಾಸಾಗರರು 'ನೀನಿರುವ ತನಕ ಬರೆಯುವುದಿಲ್ಲ, ಯಾಕೆಂದರೆ ಅದರಿಂದ ನಿನಗೆ ನೋವಾಗಬಹುದು. ಆದರೆ ನೀನು ತೀರಿಕೊಂಡ ಅನಂತರ ಬರೆಯುತ್ತೇನೆ, ಯಾಕೆಂದರೆ ನನಗೆ ಸರಿಯೆನಿಸಿದ್ದನ್ನು ನಾನು ಎಂದಾದರೂ ಹೇಳಿಕೊಳ್ಳಲೇಬೇಕು' ಎಂದು ಉತ್ತರಿಸಿದರಂತೆ. ಮಗನಲ್ಲಿ ಕಂಡ ಸತ್ಯನಿಷ್ಠೆ ಹಾಗೂ ಪರಜೀವಿಪ್ರೇಮಗಳ ವಿಶಿಷ್ಟ ಸಂಲಗ್ನರೂಪವನ್ನು ಮೆಚ್ಚಿಕೊಂಡ ಆ ತಂದೆ ಹಾಗಿದ್ದರೆ ಈಗಲೆ ಬರೆ' ಎಂದು ಒಪ್ಪಿಗೆ ಕೊಟ್ಟರಂತೆ. ಸುಬ್ಬಣ್ಣ ಇದ್ದದ್ದು ವಿದ್ಯಾಸಾಗರರಂತೆಯೆ; ಆತ ಬಾಳಿದ್ದು ಸಾಧನೆಗೈದದ್ದು ವಿದ್ಯಾಸಾಗರರು ಸಂಪ್ರದಾಯದಲ್ಲಿ ಗಟ್ಟಿ ಬೇರೂರಿನಿಂತು ಆಧುನಿಕತೆಗೆ ತೆರೆದುಕೊಂಡಂತೆಯೆ. ಇವರಿಬ್ಬರ ನಡುವಿನ ಇನ್ನೊಂದು ಮುಖ್ಯ ಸಾಮ್ಯವೆಂದರೆ, ವಿದ್ಯಾಸಾಗರರು ಬಂಗಾಲಿಯಲ್ಲಿ ಹೊಸತೊಂದು ಬಗೆಯ ಗದ್ಯವನ್ನು ಕಟ್ಟಿಕೊಟ್ಟಂತೆಯೆ ಸುಬ್ಬಣ್ಣ ಕನ್ನಡದಲ್ಲಿ ಹೊಸತೊಂದು ಗದ್ಯವನ್ನು ಸೃಷ್ಟಿಸಿದ. ಸುಬ್ಬಣ್ಣನ ಗದ್ಯ ಒಂದು

ಕ್ಷಣ ಕಥೆ ಹೇಳಬಲ್ಲದು, ಇನ್ನೊಂದು ಕ್ಷಣ ತೀರಾ ಅಮೂರ್ತ ಸಂಗತಿಗಳನ್ನು ಚರ್ಚಿಸಬಲ್ಲದು. ಅಲ್ಲಿ ಒಂದು ಸಾಲು ಕಾವ್ಯತೀವ್ರತೆಯಲ್ಲಿ ಅದ್ದಿದ್ದು, ಇನ್ನೊಂದು ಸಾಲು ಸಾತ್ವಿಕಕ್ರೋಧದಲ್ಲಿ ಹತ್ತಿ ಉರಿಯುವಂಥದಾಗಿರುತ್ತದೆ; ಒಂದು ಭಾಗ ದೇಸಿ ಕನ್ನಡದ ಕಸುವನ್ನು ತೋರುವಂತಿದ್ದರೆ ಇನ್ನೊಂದು ಭಾಗ ಸಂಸ್ಕೃತದಂತಹ ಭಾಷೆಯಿಂದ ದೀಪ್ತಗೊಂಡಿರುತ್ತದೆ. ಹೀಗೆ, ಯಾವುದನ್ನೂ ತಿರಸ್ಕರಿಸದೆ, ಎಲ್ಲವನ್ನೂ ಪ್ರೀತ್ಯಾದರಗಳಲ್ಲಿ ಪರಿಶೀಲಿಸಿ ಅವುಗಳ ಅತ್ಯುತ್ತಮ ಅಂಶಗಳನ್ನು ಸ್ವೀಕರಿಸಿದ, ಹಾಗೆ ತಂದುಕೊಂಡದ್ದನ್ನು ತನ್ನ ಪರಿಸರದಲ್ಲಿ ಕಸಿ ಮಾಡಿ ಬೆಳೆಸಿದ ಸುಬ್ಬಣ್ಣ ನಮ್ಮ ದೇಶಕಾಲಗಳು ಕಂಡ ಅಪರೂಪದ ಅಖಂಡಪ್ರಜ್ಞೆಯ ಚಿಂತಕರಲ್ಲಿ ಓರ್ವನಾದವನು.

ಸುಬ್ಬಣ್ಣನ ಹೆಗ್ಗೋಡು ಇಲ್ಲಿಯವರೆಗೂ ಅನ್ಯಭಾಷೆಗಳಿಂದ ಕನ್ನಡಕ್ಕೆ ಅನುವಾದಿಸುತ್ತಾ ಬಂದಿದೆ. ಈಗ, ಈ ಪುಸ್ತಕದ ಮೂಲಕ, ಅದು ಮೊತ್ತಮೊದಲ ಬಾರಿಗೆ ತನ್ನನ್ನು ಆಂಗ್ಲಭಾಷೆಗೆ ಅನುವಾದಿಸಿಕೊಂಡಿದೆ. ಸುಬ್ಬಣ್ಣನ ಮಗ ಅಕ್ಷರ, ಮನು ಚಕ್ರವರ್ತಿ ಮತ್ತು ಆತನ ಸಂಗಡಿಗರು ಸೇರಿ ಈ ಅನುವಾದ ಸಂಗ್ರಹವನ್ನು ಹೊರತಂದಿದ್ದು, ವಿವೇಕ ಶಾನಭಾಗ ಮತ್ತು ಗೆಳೆಯರು ಇಲ್ಲಿ ಈ ಕೃತಿಯ ಬಿಡುಗಡೆಯ ಸಮಾರಂಭವನ್ನು ಏರ್ಪಡಿಸಿದ್ದಾರೆ. ಕನ್ನಡ ಹೀಗೆ ಇಂಗ್ಲಿಷ್ ಅನುವಾದವೊಂದರ ಮೂಲಕ ಜಾಗತಿಕಸ್ತರದಲ್ಲಿ ತನ್ನನ್ನು ಅಭಿವ್ಯಕ್ತಿಸಿಕೊಳ್ಳುತ್ತಿರುವುದು, ಅಂಥದೊಂದು ಸಂದರ್ಭದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿರುವುದು ನನಗೆ ತುಂಬು ಸಂತೋಷದ ವಿಷಯವಾಗಿದೆ. ಅದರಷ್ಟೆ ಸಂತೋಷದ ಇನ್ನೊಂದು ಸಂಗತಿಯೆಂದರೆ ಸುಬ್ಬಣ್ಣನ ಕನ್ನಡಮಿತ್ರರಾದ ನೀವೆಲ್ಲ ಈ ಸಮಾರಂಭಕ್ಕೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ್ದೀರಿ. ನಿಮ್ಮೆಲ್ಲರ ಸಮ್ಮುಖದಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡುವ ಗೌರವ ದೊರಕಿರುವುದು ನನಗೆ ಇನ್ನಷ್ಟು ಸಾರ್ಥಕತೆಯ ಭಾವ ನೀಡುವಂತಹ ವಿಷಯವಾಗಿದೆ. ಧನ್ಯವಾದಗಳು.

– ಕನ್ನಡಕ್ಕೆ : ಜಸವಂತ ಜಾಧವ

– ಸಾಭಾರ : ನೀನಾಸಂ ಮಾತುಕತೆ–೯೧

* * *

ಜನಪದ ವ್ಯಕ್ತಿ

ಭೂ ಹೀನರ ತಾಯಿ : ಕೃಷ್ಣಮ್ಮಾಳ್

ಸಂತ ವಿನೋಬಾರ ಭೂದಾನ ಯಜ್ಞ ಆಂದೋಲನ ಜಗತ್ತಿನಲ್ಲಿಯೇ ವಿಶಿಷ್ಟವಾದುದು. ಅಹಿಂಸೆ, ಪ್ರೇಮ, ಕರುಣೆಯ ಮೂಲಕ ಭೂಮಾಲೀಕರ ಹೃದಯಸ್ಪರ್ಶಿಸಿ ಅವರಿಂದ ಹೆಚ್ಚುವರಿ ಭೂಮಿಯನ್ನು ದಾನವಾಗಿ ಪಡೆದು ಅದನ್ನು ಸ್ಥಳೀಯ ಭೂಹೀನರಿಗೆ ವಿತರಿಸುವ ಉದ್ದೇಶ ಭೂದಾನ ಆಂದೋಲನಕ್ಕೆ ಇತ್ತು. ವಿನೋಬಾರವರು ಸುಮಾರು ಹದಿನಾಲ್ಕು ವರ್ಷಗಳ ಕಾಲ ಭಾರತದಾದ್ಯಂತ ಪಾದಯಾತ್ರೆ ಮಾಡಿ ನಲವತ್ತು ಲಕ್ಷ ಎಕರೆಯಷ್ಟು ಭೂಮಿಯನ್ನು ದಾನವಾಗಿ ಪಡೆದು ವಿತರಿಸಿದರು. ಈ ಆಂದೋಲನಕ್ಕೆ ಹಿರಿಯ ಸಮಾಜವಾದ ನಾಯಕರಾಗಿದ್ದ ಜೆ.ಪಿ.ಯವರು ತಮ್ಮ ಜೀವನವನ್ನು ದಾನವಾಗಿ ಕೊಟ್ಟರು. ಇದೇ ರೀತಿಯಲ್ಲಿ ತಮಿಳುನಾಡಿನ ಜಗನ್ನಾಥನ್ ಹಾಗೂ ಅವರ ಪತ್ನಿ ಕೃಷ್ಣಮ್ಮಾಳ್ ಕೂಡ ಭೂದಾನ ಆಂದೋಲನಕ್ಕೆ ಅರ್ಪಿಸಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಈ ದಂಪತಿಗಳು ಭೂರಹಿತ ರೈತರ ಏಳಿಗೆಗಾಗಿ ಕೆಲಸ ಮಾಡಲು ಸಂಕಲ್ಪಿಸಿದರು. ಜಾಗನ್ನಾಥನ್‌ರವರು ತೀರಿಕೊಂಡ ಮೇಲೆ ಕೃಷ್ಣಮ್ಮಾಳ್ ಒಬ್ಬಂಟಿಗರಾಗಿದ್ದುಕೊಂಡೇ ಭೂ ಸಮಸ್ಯೆಯ ಪರಿಹಾರಕ್ಕಾಗಿ ಕೆಲಸಮಾಡಿಕೊಂಡು ಬರುತ್ತಿದ್ದಾರೆ. ಅವರ ಈ ಮಹತ್ ಕಾರ್ಯವನ್ನು ಗುರುತಿಸಿ ಸ್ವಿಜರ್‌ಲ್ಯಾಂಡಿನ ಸಮಿಟ್ ಫೌಂಡೇಶನ್ ಆವಾರ್ಡ್ ಕೊಟ್ಟಿತು. ಸಿಯಾಟಲ್ ವಿದ್ಯಾಲಯವು ಓಪಸ್ ಬಹುಮಾನವನ್ನು ಕೊಟ್ಟಿತು. ರೈಟ್ ಲೈವ್ಲಿಹುಡ್ ಅವಾರ್ಡ್ ಕೂಡ ಬಂದಿತು. ಕೃಷ್ಣಮ್ಮಾಳ್ ವಿಶ್ವವಿದ್ಯಾನಿಲಯದಲ್ಲಿ ಮಹತ್ಮಾಗಾಂಧಿಯವರನ್ನು ಭೇಟಿಯಾದರು, ಅವರಿಂದ ಪ್ರಭಾವಿತಗೊಂಡರು ನಂತರ ವಿನೋಬಾರ ಭೂದಾನ ಆಂದೋಲನ ಸೇರಿದರು. ವಿನೋಬಾರವರ ಆದೇಶದ ಮೇರೆಗೆ ಜಗನ್ನಾಥನ್ ಮತ್ತು ಕೃಷ್ಣಮ್ಮಾಳ್ ತಮಿಳುನಾಡು ರಾಜ್ಯದ ಭೂದಾನ ಆಂದೋಲನದ ಜವಾಬ್ದಾರಿ ಹೊತ್ತುಕೊಂಡರು. ಗ್ರಾಮದಾನದ ವಿಚಾರವನ್ನು ಜನತೆಗೆ ಮುಟ್ಟಿಸಿದರು. ಆಗ ಜಮೀನಿನ ಒಡೆತನ ದೇವಸ್ಥಾನಗಳಿಗೆ ಒಳಪಟ್ಟಿತ್ತು. ಒಂದು ಇಂಚು ಭೂಮಿಯೂ ಕೂಡ ದಲಿತರಿಗಿರಲಿಲ್ಲ. ಅವರಿಗೆ ತಮ್ಮ ಗುಡಿಸಲುಗಳನ್ನು ಕಟ್ಟಲು ಸ್ಥಳ ಪಡೆಯುವುದು ಕಷ್ಟವಾಗಿತ್ತು. ಅಂಥ ಸಂದರ್ಭದಲ್ಲಿ ಕೃಷ್ಣಮ್ಮಾಳ್ ಮತ್ತು ಜಗನ್ನಾಥನ್ ಭೂಹೀನ ದಲಿತ ರೈತರನ್ನು ಒಗ್ಗೂಡಿಸಿ ದೇವಸ್ಥಾನಗಳ ಒಡೆತನದಲ್ಲಿದ್ದ ಭೂಮಿಯ ಹಂಚಿಕೆ ಭೂಹೀನರಿಗೆ ಆಗುವಂತೆ ಮಾಡಿದರು. ಸುಮಾರು ಎಂಭತ್ತೊಂಭತ್ತು ವಯಸ್ಸಿನ ಕೃಷ್ಣಮ್ಮಾಳ್ ಇಂದಿಗೂ ಗಾಂಧೀ ಮತ್ತು ವಿನೋಬಾರ ವಿಚಾರಗಳಿಗೆ ಅರ್ಹನಿಷೆ ದುಡಿಯುತ್ತಿದ್ದಾರೆ. ಓರ್ವ ದಲಿತ ಮಹಿಳೆಯು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಡಿ ತಮ್ಮ ಜೀವನವನ್ನು ಸವೆಸಿರುವ ಕೃಷ್ಣಮ್ಮಾಳ್ ಆದರ್ಶ ಮಹಿಳೆಯಾಗಿದ್ದಾಳೆ.

* * *

ಬೆಳ್ಳೇಕರೆಯಲ್ಲಿ ಹಸಿರು ಸಂತ

– *ಪ್ರಸಾದ್ ರಕ್ಷಿದಿ*

"ಹಸಿರು ಸಂತ ನಮ್ಮೂರಿಗೂ ಬಂದಿದ್ದರು", ಈ ಮಾತು ಮುಂದಿನ ಪೀಳಿಗೆಯ ಯಾವುದೇ ಊರಿನ ಜನರಿಗೆ ಖುಷಿಯಿಂದ, ಸವಿನೆನಪಿನಿಂದ, ಹೇಳಲು-ಹೆಮ್ಮೆಪಡಲು ದೊರೆತರೆ ಅವರು ಅದೃಷ್ಟಶಾಲಿಗಳು. ಆ ಭ್ಯಾಗ್ಯ ಮೊನ್ನೆ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬೆಳ್ಳೇಕರೆ ಎಂಬ ಪುಟ್ಟ ಹಳ್ಳಿಯ ಜನರಿಗೆ ದೊರೆಯಿತು. ಗುಂಡ್ಯ ಜಲ ವಿದ್ಯುತ್ ಯೋಜನಾ ಪ್ರದೇಶದ ವೀಕ್ಷಣೆಗೆಂದು ಹಾಸನ ಜಿಲ್ಲೆಗೆ ಬಂದ ಸುಂದರಲಾಲ್ ಬಹುಗುಣ ದಂಪತಿಗಳು ಡಿಸೆಂಬರ್ ೨೨ರಂದು ಸಕಲೇಶಪುರ ತಾಲ್ಲೂಕಿನ ಹೊಂಗಡಹಳ್ಳಿ ಬೆಟ್ಟಕುಮೇರಿ ಪ್ರದೇಶಗಳಲೆಲ್ಲಾ ತಿರುಗಿ ಸಭೆ ಸಂವಾದ ನಡೆಸಿ, ಸಂಜೆ ತಮ್ಮ ಜೊತೆಗಾರರೊಂದಿಗೆ ಬೆಳ್ಳೇಕೆರೆಗೆ ಬಂದರು. ಅಂದು ಅವರು ಬೆಳ್ಳೇಕೆರೆಯಲ್ಲೇ ಉಳಿಯುವವರಿದ್ದರು. ಆದಷ್ಟೂ ಹಳ್ಳಿಗಳಲ್ಲೇ ತಂಗಲು ಇಷ್ಟ ಪಡುವ ಬಹುಗುಣ ದಂಪತಿಗಳು, ಹಿಂದಿನ ರಾತ್ರಿಯನ್ನು ಹೊಂಗಡಹಳ್ಳಿ ಗ್ರಾಮದಲ್ಲೇ ಕಳೆದಿದ್ದರು. ಡಿಸೆಂಬರ್ ೨೨ರಂದು ಸಂಜೆ ಬೆಳ್ಳೇಕರೆಯ 'ಜೈ ಕರ್ನಾಟಕ ಸಂಘ' ಈಗಷ್ಟೇ ನಿರ್ಮಾಣವಾಗುತ್ತಿರುವ ಪೂರ್ಣ ಚಂದ್ರ ತೇಜಸ್ವಿ ರಂಗಮಂದಿರದಲ್ಲಿ 'ಪ್ರಕೃತಿ-ಪರಿಸರ ಯಾತ್ರೆ'ಯ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಯುವಜನರಿಗಾಗಿ ಮತ್ತು ಆಸಕ್ತರಿಗಾಗಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮ ಚಾರಣ, ಪರಿಸರ ಸಂವಾದ, ನಕ್ಷತ್ರ ವೀಕ್ಷಣೆ, ನೆಲ-ಜಲ ಪ್ರಾತ್ಯಕ್ಷಿಕೆಗಳನ್ನು ಒಳಗೊಂಡಿದ್ದು ಆಸಕ್ತರ ಆಗಮನವನ್ನು ಹೊಂದಿಕೊಂಡು ತಿಂಗಳಿಗೊಮ್ಮೆ ನಡೆಸುವಂತೆ ಆಯೋಜಿಸಲಾಗಿದೆ. ಅಂದು ನಡೆದ ಸರಳ ಸಮಾರಂಭದಲ್ಲಿ ಮಕ್ಕಳಿಗೆ ಯಾತ್ರಾ ಜೋಳಿಗೆಯನ್ನು ನೀಡುವ ಮೂಲಕ ಅಜ್ಜ ಸುಂದರಲಾಲ್ ಬಹುಗುಣ 'ಪ್ರಕೃತಿ-ಪರಿಸರ ಯಾತ್ರೆ'ಗೆ ಚಾಲನೆ ನೀಡಿದರು. ಪರಿಸರಾಸಕ್ತರು, ರೈತರು, ರೈತ ಮುಖಂಡರು, ಕಾರ್ಮಿಕರು, ರಂಗಾಸಕ್ತರನ್ನು ಒಳಗೊಂಡು ಹಾನುಬಾಳು, ಮೂಡಿಗೆರೆ, ಸಕಲೇಶಪುರಗಳಿಂದಲೂ ಹಲವಾರು ಜನರು ಈ ಕಾರ್ಯಕ್ರಮಕ್ಕೆ ಬಂದಿದ್ದರು. ಇಲ್ಲಿನ ರಂಗವೇದಿಕೆಯನ್ನು, ರಂಗಚಟುವಟಿಕೆಗಳನ್ನು ತಿಳಿದುಕೊಂಡು ಪೂರ್ಣಚಂದ್ರ ತೇಜಸ್ವಿ ರಂಗಮಂದಿರದ ಆಹ್ಲಾದಕರ ಪರಿಸರದಿಂದ ಖುಷಿಗೊಂಡಂತಿದ್ದ ಬಹುಗುಣ ಲಹರಿ ಬಂದಂತೆ ಮಾತನಾಡುತ್ತಾ ಹೋದರು. ಚಿಪ್ಕೋ ಚಳುವಳಿಯಿಂದ ಆರಂಭಿಸಿದ ಅಜ್ಜನ ಮಾತು ಹೆಚ್ಚಾಗಿ ರಂಗಭೂಮಿಯ ಸುತ್ತಲೇ ತಿರುಗಿತು. 'ಭಾಷಣಕ್ಕೆ ಬಾಯಿ ಮಾತ್ರ ಇದೆ, ಆದರೆ ರಂಗಭೂಮಿಗೆ ಬಾಯಿ, ಕಣ್ಣು, ಕಿವಿ ಎಲ್ಲವೂ ಇವೆ. ಹಾಗಾಗಿ ಯಾವುದೇ ಚಳುವಳಿಗೂ ರಂಗಭೂಮಿ ಅತ್ಯಂತ ಶಕ್ತ ಮಾಧ್ಯಮ. ನಾಟಕಗಳನ್ನು ನೋಡಲು ಮಕ್ಕಳು, ದೊಡ್ಡವರು, ಮಹಿಳೆಯರು ಎಲ್ಲರೂ ಬರುತ್ತಾರೆ. ಅದರಲ್ಲು ಮಹಿಳೆಯರು ಸ್ವಾಭಾವಿಕವಾಗಿ ಹೆಚ್ಚು ಕರುಣಾಮಯಿಗಳು, ನಾಟಕ ನೇರವಾಗಿ ಹೃದಯಕ್ಕೆ

ತಟ್ಟುವುದರಿಂದ ಅದರ ಪರಿಣಾಮ ಮಹಿಳೆಯರಲ್ಲಿ ಹೆಚ್ಚಿನದಾಗಿರುತ್ತದೆ. ಆದ್ದರಿಂದ ಚಳುವಳಿಗೂ ಹೆಚ್ಚಿನ ಬಲ ಬರುತ್ತದೆ' ಎಂದ ಅವರು ನೀವು ಈ ಪರಿಸರ ಕಾಳಜಿಯ ಯಾತ್ರೆಯನ್ನು ರಂಗಕ್ರಿಯೆಗಳ ಮೂಲಕವೂ ಮುಂದುವರೆಸಿ, ಈ ಕೆಲಸವನ್ನು ಯಾವ ಭಾಷಣಕಾರರಾಗಲೀ, ಸರ್ಕಾರವಾಗಲೀ ಮಾಡಲಾರದು ಎಂದರು. ತಾವು ಕೂಡ ಆರಂಭದ ದಿನಗಳಲ್ಲಿ ಬೀದಿ ನಾಟಕಗಳು ಮತ್ತು ಹಾಡುಗಾರರ ಮೂಲಕವೂ ಜನಜಾಗೃತಿ ಮೂಡಿಸಿದ್ದನ್ನು ನೆನೆಸಿಕೊಂಡರು. ಪರಿಸರ ಯಾತ್ರೆಯ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ನಾವು ಮಾಡುವ ಈ ಕೆಲಸ ಮನುಷ್ಯರಿಗೆ ಮಾತ್ರವಲ್ಲ ಇಡೀ ಭೂಮಂಡಲದ ಉಳಿವಿಗೆ ಆ ಮೂಲಕ ಸಕಲ ಜೀವರಾಶಿಯ ಉಳಿವಿಗೆ ಅಗತ್ಯ ಆದರೆ ನಮಗೆ ಹಿರಿಯರಿಗೆ ಇನ್ನೂ ಹೆಚ್ಚು ಕಾಲಾವಕಾಶ ಉಳಿದಿಲ್ಲ. ನಮ್ಮ ಮುಂದಿರುವ ಈ ಎಳೆಯರಿಗೆ ಸಾಕಷ್ಟು ಅವಕಾಶವಿದೆ. ಆದ್ದರಿಂದ ಮಕ್ಕಳೇ ನಮ್ಮ ಮುಂದಿನ ಭರವಸೆ, ಎಂದ ಅವರು, ನಿಮ್ಮ ಪರಿಸರ ಯಾತ್ರೆಗೆ ನಾನೇನು ಕೊಡಬಲ್ಲೆ ಒಂದು ಧ್ಯೇಯವಾಕ್ಯ ನೀಡುತ್ತೇನೆ. "Yes to life, No to death" ಇದು ನಿಮ್ಮ ಚಿಂತನೆಯಲ್ಲಿ ಇರಲಿ, ಇದೇ ಪರಿಸರದ ಉಳಿವಿಗೆ ದಾರಿ ತೋರುತ್ತದೆ ಎಂದರು. ಜೊತೆಗೆ ಪರಿಸರ ರಕ್ಷಣೆಯ ಪ್ರಮಾಣವಚನವನ್ನೂ ಬೋಧಿಸಿದರು.

ಈ ಊರಿನ ಈ ರಂಗಮಂದಿರದ ಸುತ್ತ ಈಗ ಕಾಣುತ್ತಿರುವ ಸಾಮಾಜಿಕ ಅರಣ್ಯಕ್ಕೆ ಹಾರ್ಲೆ ಗಣಪಯ್ಯನವರಿಂದ ಪ್ರೇರಣೆ, ಚಾಲನೆ ದೊರೆತಿದೆ. ಇದೇ ಊರಿನ ಪಕ್ಕದ ಎತ್ತಿನಹಳ್ಳಿ ನದಿ ನೀರನ್ನು ಹೇಮಾವತಿ ನದಿಗೆ ತಿರುಗಿಸುವ ಯೋಜನೆಯನ್ನವರು ಅಂದೇ ವಿರೋಧಿಸಿದ್ದರು. ನಂತರ ಈ ಸಾಮಾಜಿಕ ಅರಣ್ಯ ಬೆಳೆಸುವಲ್ಲಿ ಇಲ್ಲಿನ ಹಲವರು ಹೋರಾಟ ನಡೆಸಿದ್ದಾರೆ. ಸೇವೆ ಸಲ್ಲಿಸಿದ್ದಾರೆ. ಈಗ ಸುಂದರಲಾಲ್ ಬಹುಗುಣರವರು ಈ ಗ್ರಾಮಕ್ಕೆ ಆಗಮಿಸಿದ ನೆನಪಿಗಾಗಿ ಈ ಸಮಾಜಿಕ ಅರಣ್ಯಕ್ಕೆ ಅವರ ಹೆಸರಿಡುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಉತ್ತರಿಸಿದಂತೆ ಮಾತನಾಡಿದ ಸುಂದರಲಾಲ್ ಬಹುಗುಣ ತಾವು ಗಾಂಧೀಜಿಯ ಪ್ರೇರಣೆ ಮತ್ತು ಆಶೀರ್ವಾದಗಳಿಂದಲೇ ಈ ಹಾದಿಯನ್ನು ಆರಿಸಿಕೊಂಡಿದ್ದೇನೆ, ಆದರೆ ಈ ಸಾಮಾಜಿಕ ಅರಣ್ಯಕ್ಕೆ ನನ್ನ ಹೆಸರಿಡುವುದಾದರೆ ಮೊದಲು ಅದನ್ನು ನಿಜ ಅರಣ್ಯವಾಗಿಸಬೇಕು ಎಂದರು.

ಸಮಾಜಿಕ ಕಾರ್ಯಕರ್ತೆಯಾಗಿದ್ದು ಬಹುಗುಣಾರನ್ನು ಸರ್ವೋದಯದತ್ತ ಸೆಳೆದ ಮತ್ತು ಸಾಮಾಜಿಕ ಸೇವೆಗಾಗಿ ಜಮ್ನಾಲಾಲ್ ಬಜಾಜ್ ಪ್ರಶಸ್ತಿಯನ್ನು ಗಳಿಸಿರುವ ಬಹುಗುಣರ ಪತ್ನಿ ವಿಮಲಾ ಬಹುಗುಣ, ಪುತ್ರ ರಾಜೀವ್ ಬಹುಗುಣ ಜೊತೆಗಿದ್ದರು.

ಅಂದು ಗ್ರಾಮದಲ್ಲಿ ಉಳಿದ ಬಹುಗುಣ ದಂಪತಿ ಮೂಡಿಗೆರೆಯ ಗೆಳೆಯರು ತಂದಿತ್ತ ತೇಜಸ್ವಿಯವರ 'ಪರಿಸರದ ಕಥೆಗಳು' ಇಂಗ್ಲಿಷ್ ಅನುವಾದವನ್ನು ಓದಿದರು. ಕಾಫಿ ತೋಟಗಳನ್ನು ಕಂಡು "ಮರಗಳಡಿಯಲ್ಲಿ ಕೃಷಿ ಮಾಡುವ ನಿಮ್ಮ ಕ್ರಮ ಇಷ್ಟವಾಯಿತು" ಎಂದರು. ಕಾಫಿಯನ್ನು ಖುಷಿಯಾಗಿ ಕುಡಿದರು.

* * *

ಮಹಾತ್ಮರ ಪ್ರತಿಮೆ : ಮೊದಲ ಸಭೆ

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಗಾಂಧೀಜಿಯವರನ್ನು ಮರೆಯುತ್ತಿರುವ ವಿಷಯ ಕುರಿತು ವಿಡಂಬನಾತ್ಮಕ ದೀರ್ಘ ಕತೆಯ ಮೊದಲ ಅಧ್ಯಾಯವಿದು. ಕ್ರಮಶಃ ಮುಂದುವರಿಯುವುದು)

ಪುರಸಭಾಧ್ಯಕ್ಷರಾಗಿ ಕಾರ್ಯಭಾರವನ್ನು ವಹಿಸಿಕೊಂಡ ಮೇಲೆ, ಅವರು ಕರೆದ ಮೊದಲ ಸಭೆ ಅದಾಗಿತ್ತು. ತರುಣರಾಗಿದ್ದ ಅಧ್ಯಕ್ಷರು ಆ ಮೊದಲ ಸಭೆಯಲ್ಲಿ ಸಭೆಯ ಗಮನಕ್ಕೆ ತಂದ ವಿಷಯ ಹೀಗಿತ್ತು:

"ಪುರಸಭೆಯ ಗೌರವಾನ್ವಿತ ಸದಸ್ಯ ಮಿತ್ರರೇ, ನಮ್ಮ ಪಟ್ಟಣದ ಹೊರವಲಯದಲ್ಲಿರುವ ಗಾಂಧೀ ಮೈದಾನದ ಖಾಲಿ ನಿವೇಶನದಲ್ಲಿ ಹೊಸ ಕಟ್ಟಡವನ್ನು ಕಟ್ಟಬೇಕು. ಅಲ್ಲಿಗೆ ಈ ಹಳೆಯ ಪುರಸಭಾ ಕಾರ್ಯಾಲಯವನ್ನು ಸ್ಥಳಾಂತರಿಸಬೇಕು ಎಂಬ ಸಲಹಾತ್ಮಕ ತೀರ್ಮಾನವನ್ನು ನಿನ್ನೆ ಸೇರಿದ್ದ ಸ್ಥಾಯಿ ಸಮಿತಿ ಕೈಗೊಂಡಿದೆಯೆಂಬುದನ್ನು ತಮ್ಮೆಲ್ಲರ ಗಮನಕ್ಕೆ ತರಲು ಸಂತೋಷಿಸುತ್ತೇನೆ. ಸ್ಥಾಯಿ ಸಮಿತಿಯ ಈ ಸಲಹೆಯನ್ನು ಈ ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿದ್ದೇ ಆದರೆ, ಅಗತ್ಯವಾಗಿರುವ ಅನುಮತಿಗಾಗಿ ನಾವು ಸರಕಾರಕ್ಕೆ ಬರೆಯಲು ಸಾಧ್ಯವಾಗುತ್ತದೆ. ನಮ್ಮ ಪುರಸಭೆಯ ಕಟ್ಟಡ ವಿಭಾಗವು ಒಂದು ಸೊಗಸಾದ ನಕ್ಷೆಯನ್ನು ಈಗಾಗಲೇ ಸಿದ್ಧಪಡಿಸಿರುತ್ತದೆ. ನಿಯೋಜಿತ ಕಟ್ಟಡವು ಸಾಕಾಗುವಷ್ಟು ವಿಶಾಲವಾಗಿರುತ್ತದೆ, ಸೊಗಸಾಗಿ ಮತ್ತು ಯೋಗ್ಯವಾಗಿರುತ್ತದೆ ಮಾತ್ರವಲ್ಲ, ಬರುವ ಒಂದು ನೂರು ವರ್ಷಗಳ ವರೆಗೆ ಸಾಕೆನಿಸುವಷ್ಟು ಸ್ಥಳಾವಕಾಶವನ್ನೂ ಹೊಂದಿರುತ್ತದೆ."

ಪುರಸಭಾ ಸದಸ್ಯರು ಚಪ್ಪಾಳೆ ತಟ್ಟಿ, ತಮ್ಮ ಒಪ್ಪಿಗೆ ಮತ್ತು ಸಂತೋಷವನ್ನು ಸೂಚಿಸಿದರು. "ಹೊಸ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳ ಬೇಕೆಂಬ ನಿರ್ಣಯವನ್ನು ಈ ಸಭೆ ಸರ್ವಾನುಮತದಿಂದ ಅಂಗೀಕರಿಸುತ್ತದೆ ಎಂದು ದಾಖಲಿಸಿಬಹುದಾಗಿದೆ ಎಂದು ನಾನು ಭಾವಿಸುತ್ತೇನೆ. ಅದಕ್ಕೆ ಮೊದಲು ಉತ್ತರಿಸಬೇಕಾದುದು, ಸ್ಪಷ್ಟೀಕರಿಸಬೇಕಾದುದು ಏನಾದರೂ ಇದ್ದರೆ ಮಾನ್ಯ ಸದಸ್ಯರು ಕೇಳಬಹುದು." ಉತ್ಸಾಹಗೊಂಡಿದ್ದ ಸಭಾಧ್ಯಕ್ಷರು ಮುಗುಳ್ನಗುತ್ತಾ ಹೇಳಿದರು.

"ಹೌದು ಅಧ್ಯಕ್ಷರೇ, ನನಗೊಂದು ವಿಷಯ ಸ್ಪಷ್ಟವಾಗಬೇಕಾಗಿದೆ" ಎನ್ನುತ್ತಾ ಹಿರಿಯ ಸದಸ್ಯರೊಬ್ಬರು ಎದ್ದು ನಿಂತರು. ಪ್ರತಿಯೊಬ್ಬರೂ ಪ್ರಶ್ನಾರ್ಥಕವಾಗಿ ಅವರ ಕಡೆಗೆ ನೋಡತೊಡಗಿದರು. ಅವರು ತಮ್ಮ ಗಂಟಲನ್ನು ನಾಟಕೀಯವಾಗಿ ಸರಿಪಡಿಸಿಕೊಂಡು ತಮ್ಮ ಎತ್ತರಿಸಿದ ಧ್ವನಿಯಲ್ಲಿ "ತಾವು 'ಗಾಂಧೀ ಮೈದಾನ' ಎಂದು ಹೆಸರಿಸಿದರಿ. ತಾವು ಹೆಸರಿಸಿದ ಆ ದಿಣ್ಣೆ ಜಾಗವನ್ನು ನಾನು ನನ್ನ ಬಾಲ್ಯದ ದಿನಗಳಿಂದಲೂ ನೋಡುತ್ತಾ ಬಂದಿದ್ದೇನೆ. ಆದರೆ ನಮ್ಮೀ ಸ್ಥಳದ ಮೈದಾನಕ್ಕೆ 'ಗಾಂಧೀ ಮೈದಾನ' ಎಂಬ ಹೆಸರು ಹ್ಯಾಗೆ ಬಂತು, ಯಾವಾಗ ಬಂತು, ಅಸಲಿಗೆ

ಆ ಗಾಂಧೀ ಎನ್ನುವವರು ಯಾರು ಅನ್ನೋದು ನನಗಂತೂ ತಿಳಿದು ಬಂದಿಲ್ಲ! ಒಂದು ವೇಳೆ ಈ ಮಹಾ ಸಭೆಯಲ್ಲಿರೋ ಯಾರಿಗಾದ್ರೂ ತಿಳಿದಿದ್ರೆ ದಯವಿಟ್ಟು ಹೇಳಿ ನಾನೂ ಕೇಳ್ತೇನೆ, ತಿಳ್ಕೋತೇನೆ" ಎಂದರು.

"ನನಗೂ ಇದು ತಿಳಿದಿಲ್ಲ. ಯಾಕೇಂತಂದ್ರೆ ನನ್ನ ಹಿನ್ನೆಲೆ ತಮಗೆಲ್ಲರಿಗೂ ತಿಳಿದಿದೆ. ಆದ್ದರಿಂದ ಸ್ಥಳದಲ್ಲಿರುವ ಕೆಲವು ಮಂದಿ ಹಿರಿಯರನ್ನು ಕೇಳಿ ತಿಳಿದುಕೊಂಡರಾಯಿತು, ಇನ್ನೇನಾದರೂ ಕೇಳೋದು ಇದೆಯೇ?" ಅಧ್ಯಕ್ಷರು ಪ್ರಶ್ನಿಸಿ ಮುಂದಕ್ಕೆ ಹೋಗುವವರಿದ್ದರು.

"ಹಾಗಾದ್ರೆ, ಅಧ್ಯಕ್ಷರೇ ನನ್ನ ಪ್ರಶ್ನೆಯನ್ನ ಪ್ರಶ್ನೆಯಾಗಿಯೇ ಬಿಟ್ಟುಬಿಡ್ತಾಯಿದ್ದೀರಿ!" ಹಿರಿ ಸದಸ್ಯರು ಆಕ್ಷೇಪಿಸುತ್ತಾ " ನೀವು ಬೇರೆ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಮೊದ್ಲು ನಾನು ಪ್ರಸ್ತಾಪಿಸಿರುವುದಕ್ಕೆ ಸರಿಯಾದ ಉತ್ತರ ಕೊಡಿ-ಕೊಡಬೇಕು" ಎಂದು ಒತ್ತಾಯಿಸಿದರು. ಪ್ರತಿಯೊಬ್ಬರಿಗೂ ಆಶ್ಚರ್ಯವಾಯಿತು.

ಸ್ವಯಂ ಅಧ್ಯಕ್ಷರಿಗೂ ಆಶ್ಚರ್ಯವಾಯಿತು. ದಿಗ್ಭ್ರಮೆಗೊಂಡ ಅವರು ಸಾವರಿಸಿಕೊಂಡು "ನಾವೆಲ್ಲರೂ ಈಗ ಮುಖ್ಯವಾಗಿ ಗಮನಿಸ ಬೇಕಾದುದು ಹೊಸ ಕಟ್ಟಡದ ನಿರ್ಮಾಣದ ವಿಷಯವನ್ನೇ ಹೊರತು ನಿವೇಶನ-ಮೈದಾನಗಳ ಹೆಸರನ್ನಲ್ಲ. ಆದ್ದರಿಂದ ಈ ವಿಷಯವನ್ನು ಪ್ರಸ್ತಾಪಿಸಿರುವ ಹಿರಿ ಸದಸ್ಯರು ಈಗಲೇ ಉತ್ತರಿಸ ಬೇಕೆಂದು ಒತ್ತಾಯಿಸಬಾರದು ಹಾಗೆಂದು, ಈ ವಿಷಯವನ್ನು ಕೈಬಿಡುವಂತೆಯೂ ಇಲ್ಲ. ಸರಿಯಾದ ಮಾಹಿತಿಯನ್ನು ಸಂಗ್ರಹಿಸುವ ಪ್ರಯತ್ನವನ್ನು ಖಂಡಿತಾ ಮಾಡಲಾಗುವುದು. ಈ ಮಧ್ಯೆ ಪುರಸಭೆಯ ಹೊಸ ಕಟ್ಟಡದ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸುವುದೂ ಬೇಡ; ಏಕೆಂದರೆ ಮೈದಾನಕ್ಕೆ ಹೆಸರು ಬಂದ ಮೂಲಕ್ಕಿಂತ ಅಲ್ಲಿ ಆಗಬೇಕಾಗಿರುವ ಕಟ್ಟಡದ ನಿರ್ಮಾಣ ಕಾರ್ಯ ಮುಖ್ಯ-ಬಹಳ ಮುಖ್ಯ. ಆದ್ದರಿಂದ ಒಂದಕ್ಕೊಂದು ಬೆರೆಸಿಕೊಂಡು ಮುಖ್ಯವಾದ ವಿಷಯವನ್ನು ಮೂಲೆಗೆ..." "ನೂಕೋದು ಬ್ಯಾಡ! ನೀವು ಹೇಳ್ತಿರೋದು ಬಹಳ ಸರಿ!" ಹಿಂಬೆಂಚಿನಿಂದ ಒಂದು ಧ್ವನಿ ಕೇಳಿ ಬಂದಿತು.

"ಹಾಗಾದರೆ, ಸ್ಥಾಯಿ ಸಮಿತಿಯ ಸಲಹೆಯನ್ನು ಇಂದಿನ ಈ ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿದೆಯೆಂದು ಭಾವಿಸಬಹುದೆ? ದಾಖಲಿಸಬಹುದೆ?" ಬಹಳ ಕಾತರದಿಂದ ಕೇಳಿದರು ಅಧ್ಯಕ್ಷರು.

"ನಾನು ಪ್ರಸ್ತಾಪಿಸಿರುವುದಕ್ಕೆ ಸಮಂಜಸವಾದ ಸ್ಪಷ್ಟೀಕರಣ ನೀಡೋ ಷರತ್ತಿಗೆ ಒಳಪಟ್ಟರೆ ಮಾತ್ರ ಆಗಬೋದು!" ಹಿರಿ ಸದಸ್ಯರು ಮತ್ತೆ ಒತ್ತಾಯಿಸಿದರು.

"ಮತ್ತೆ ಮತ್ತೆ ಅದೇ ವಾದದ ವಿಷಯವಾಗ್ಬಾರ್ದು!" ಹಿಂಬೆಂಚಿನ ಸದಸ್ಯರು ದೃಢವಾಗಿ ಧ್ವನಿಯೆತ್ತಿದರು.

"ಒಪ್ಪಿದ್ದೇವೆ, ಒಪ್ಪಿದ್ದೇವೆ!" ಎಲ್ಲರೂ ಒಟ್ಟಿಗೆ ಹೇಳಿದರು. ಬೆಂಬಲ ಸೂಚಕವಾಗಿ ಕೈಗಳನ್ನೂ ಎತ್ತಿದರು.

ಅಧ್ಯಕ್ಷರ ಮುಖದ ಮೇಲೆ ಗೆಲುವು ಮೂಡಿತು. ಮುಗುಳ್ನಗುತ್ತ "ದಯವಿಟ್ಟು ಕೇಳಿ, ಈವೊತ್ತಿನಿಂದ ಇನ್ನು ಒಂದು ತಿಂಗಳಿಗೆ ಅಂದರೆ ವಿಜಯದಶಮಿ ದಿನ, ಎಲ್ಲವೂ ಸಲೀಸಾಗಿ ಸಾಗಿದರೆ, ಸದರಿ ನಿವೇಶನದಲ್ಲಿ ಭೂಮಿ ಪೂಜೆಯನ್ನು ನೆರವೇರಿಸೋಣ!" ಎಂದು ಘೋಷಿಸಿದರು.

"ನಾನೂ ಒಪ್ತೇನೆ ಅಧ್ಯಕ್ಷರೇ, ಆದ್ರೆ ಈ ಭೂಮಿ ಪೂಜೆಯನ್ನು ನೆರವೇರಿಸೋದಕ್ಕೆ ಮುಂಚೆ, ಮೈದಾನದ ಹೆಸರಿನ ಬಗ್ಗೆ ಮಾಹಿತಿ ಸಂಗ್ರಹಿಸುವುದಾಗಬೇಕು. ಅದಕ್ಕೊಂದು ವ್ಯವಸ್ಥೆಯಾಗ್ಬೇಕು" ಎಂದು ಅದೇ ಗತ್ತಿನಿಂದ ಪುನರುಚ್ಚರಿಸಿದರು ಹಿರೀ ಸದಸ್ಯರು.

ಯುವ ಅಧ್ಯಕ್ಷರು ಮಾರ್ಮಿಕವಾಗಿ ಮುಗುಳ್ನಗುತ್ತಾ "ನಮ್ಮ ಹಿರೀ ಸದಸ್ಯರ ಮನಸ್ಥಿತಿ ಮತ್ತು ಭಾವನೆಗಳು ನನಗೆ ಚೆನ್ನಾಗಿ ಮನವರಿಕೆಯಾಗಿವೆ. ಇವರ ಈ ಅಭಿಪ್ರಾಯ, ಒತ್ತಡಗಳನ್ನು, ನಾವು ಮಾಡಲಿರುವ ಕಾರ್ಯಕ್ಕೆ ಅಡ್ಡಿ ಅಂತ ನಾವು ಯಾರೂ ಭಾವಿಸುವುದು ಬೇಡ. ಅವರ ಅಭಿಪ್ರಾಯ-ಆಶಯಗಳನ್ನು ಗೌರವಿಸುವುದರಲ್ಲಿ ಮೊದಲಿಗನಾಗಿರುವ ನಾನು, ಸ್ಥಳದ ಮೈದಾನಕ್ಕೆ 'ಗಾಂಧೀ ಮೈದಾನ' ಎಂಬ ಹೆಸರು ಹೇಗೆ ಬಂದಿತೆಂಬುದನ್ನು ಪರಿಶೀಲಿಸಲೆಂದೇ ಮೂವರು ಸದಸ್ಯರ ಒಂದು ಸಮಿತಿಯನ್ನು ಈಗಲೇ ಇಲ್ಲಿಯೇ ನೇಮಿಸುತ್ತೇನೆ. ಈ ಹಿರೀ ಸದಸ್ಯರೇ ಸದರಿ ತ್ರಿಸದಸ್ಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇನ್ನಿಬ್ಬರು ಇವರಿಗೆ ಸಹಾಯ ಸದಸ್ಯರಾಗಿರುತ್ತಾರೆ. ಇದಕ್ಕೆ ಸಭೆ ಒಪ್ಪಿಗೆ ನೀಡುತ್ತೆ ಅಂತ ನನ್ನ ಭಾವನೆ!"

"ಆಗಬಹುದು!" ಒಪ್ಪಿಗೆ ಸೂಚಕವಾಗಿ ಪ್ರತಿಯೊಬ್ಬರೂ ಕೈ ಎತ್ತಿದರು; "ತ್ರಿಸದಸ್ಯ ಸಮಿತಿ ಅಧ್ಯಕ್ಷರಿಗೆ ಅಭಿನಂದನೆಗಳು!" ಎಂದೂ ಗಟ್ಟಿಯಾಗಿ ಕೂಗಿದರು.

ಹಿರೀ ಸದಸ್ಯರು ಎದ್ದುನಿಂತು ಕೈಜೋಡಿಸಿ, ತಲೆಬಾಗಿ, "ಈ ಸಭೆ ನನಗೆ ನೀಡಿರುವ ಗೌರವವನ್ನ, ಅದಕ್ಕಿಂತ ಹೆಚ್ಚಾಗಿ ಹೊಂದಿರುವ ಹೊಣೆಗಾರಿಕೆಯನ್ನ ನಾನು ಅತ್ಯಂತ ವಿನಮ್ರನಾಗಿ ಒಪ್ಪಿಕೊಂಡಿರುತ್ತೇನೆ. ಒಂದು ತಿಂಗಳಿನ ಅವಧಿಯೊಳಗಾಗಿ ನಮ್ಮೀ ಸಮಿತಿ ಮಾಹಿತಿಯನ್ನು ಸಂಗ್ರಹಿಸಿ ಈ ಮಹಾಸಭೆಯ ಮುಂದೆ ಮಂಡಿಸ್ತದೆ" ಎಂದು ಹೇಳಿದರು.

"ನಿಮ್ಮ ಕರ್ತವ್ಯ ನಿರ್ವಹಣೆಗೆ ನಮ್ಮ ಸಂಪೂರ್ಣ ಬೆಂಬಲವಿದೆ" ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ನುಡಿದ ಅಧ್ಯಕ್ಷರು "ತ್ರಿಸದಸ್ಯ ಸಮಿತಿ ನಮ್ಮ ಕಾರ್ಯಾಲಯದ ವಾಹನವನ್ನು ಬಳಸಬಹುದು, ತಗಲುವ ಎಲ್ಲಾ ವೆಚ್ಚಗಳನ್ನು ಪುರಸಭೆಯಿಂದಲೇ ಭರಿಸಲಾಗುವುದು. ದೇಶದ ಯಾವುದೇ ಭಾಗಕ್ಕೆ ಹೋಗಬೇಕಾಗಿ ಬಂದರೂ ಹಿಂದು-ಮುಂದು ನೋಡಬೇಕಾಗಿಲ್ಲ, ಅಗತ್ಯವೆನಿಸಿದರೆ ವಿಮಾನಯಾನಕ್ಕೂ ಅನುಮತಿ ನೀಡಲಾಗುವುದು. ಒಂದು ವೇಳೆ ಇದೇ ಉದ್ದೇಶಕ್ಕಾಗಿ ಹೊರದೇಶಕ್ಕೆ ಹೋಗಬೇಕೆಂಬ ಅನಿವಾರ್ಯತೆ ಕಂಡು ಬಂದರೆ, ಸಂಬಂಧಪಟ್ಟವರಿಂದ ಅನುಮತಿ ಪಡೆದು ಅಗತ್ಯ ವ್ಯವಸ್ಥೆ ಮಾಡಲಾಗುವುದು, ಒಟ್ಟಿನಲ್ಲಿ, ಈ ಗಾಂಧೀ ಎಂಬುವವರು ಯಾರು? ಈ ಸ್ಥಳದ ಮೈದಾನಕ್ಕೆ 'ಗಾಂಧೀ ಮೈದಾನ' ಎಂಬ ಹೆಸರು ಹೇಗೆ ಬಂದಿತೆಂಬುದು ತೀರ್ಮಾನವಾದರೆ ಸರಿ!" ಎಂದು ಸ್ಪಷ್ಟಪಡಿಸಿದರು.

"ದೊಡ್ಡತನ, ನಿಜಕ್ಕೂ ದೊಡ್ಡತನ!" ಎಂದು ಪ್ರಶಂಸಿಸತೊಡಗಿದ ಹಿರೀ ಸದಸ್ಯರು "ಪ್ರಜಾಪ್ರಭುತ್ವದ ಕ್ರಮ, ಮನೋಭಾವ ಅಂದ್ರೆ ಹೀಗಿರಬೇಕು, ಭಿನ್ನಮತೀಯ ಅಭಿಪ್ರಾಯಕ್ಕೂ ಅವಕಾಶ, ಸಮಸ್ಯೆಯ ಪರಿಹಾರಕ್ಕೆ ಅವರದ್ದೂ ಸಹಭಾಗಿತ್ವ! ನಿಜಕ್ಕೂ ದೊಡ್ಡತನ!" ಎಂದರು.

(ಮುಂದುವರಿಯುವುದು...)

ಜನಪದ ಸೇವಾ ಟ್ರಸ್ಟ್ ಸಮಾಚಾರ


ಜನಪದ ಸೇವಾ ಟ್ರಸ್ಟ್ ಕಳೆದ ೫೦ ವರ್ಷಗಳಿಂದ ಖಾದಿ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಏಕೆಂದರೆ ಟ್ರಸ್ಟ್ ಗಾಂಧೀ ವಿಚಾರದ ಸಂಸ್ಥೆ. ಅಂಥ ಸಂಸ್ಥೆಯಲ್ಲಿ ಖಾದಿ ಕಾರ್ಯಕ್ರಮ ಇರಬೇಕಾದುದು ಸೂಕ್ತ ಮತ್ತು ಅನಿವಾರ್ಯ. ಏಕೆಂದರೆ ಗಾಂಧೀಯವರು ತಮ್ಮ ಜೀವನ ಪೂರ್ತಿ ಖಾದಿ ವಿಷಯವಾಗಿ ಸವೆಸಿದರು. ಆದ್ದರಿಂದಲೇ ಗಾಂಧೀ ಮತ್ತು ಖಾದಿ ಪರ್ಯಾಯ ಶಬ್ದಗಳಾಗಿವೆ. ಟ್ರಸ್ಟ್ ಪ್ರಾರಂಭವಾದಾಗಿನಿಂದ ಖಾದಿ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಕಾರ್ಯದಲ್ಲಿ ಅನೇಕ ಏರಿಳಿತಗಳಾಗಿವೆ. ಕೆಲವೊಂದು ಸಲ ತುಂಬ ನಿರಾಸೆಯಾಗಿದೆ. ಮಗದೊಂದು ಸಲ ಆಶಾಭಾವನೆ ಮೂಡಿದೆ. ಈಗ ಖಾದಿ ಕಾರ್ಯಕ್ರಮದ ವಿಚಾರದಲ್ಲಿ ಟ್ರಸ್ಟ್ ಆಶಾದಾಯಕ ಮನೋಭಾವದ ಸ್ಥಿತಿಯಲ್ಲಿದೆ. ಏಕೆಂದರೆ ಟ್ರಸ್ಟಿನ ಸಿದ್ಧ ಉಡುಪುಗಳ ವಿಭಾಗ ಹಾಗೂ ನೇಯ್ಗೆ ವಿಭಾಗ ಏರಿಕೆಯ ಸಂಭವವನ್ನು ಪಡೆದಿವೆ. ಈಗ ಈ ಉದ್ಯಮದಲ್ಲಿ ಹನ್ನೆರಡು ಜನರು ತೊಡಗಿದ್ದಾರೆ. ಕ್ರಮೇಣ ಈ ಕೆಲಸವನ್ನು ಅಭಿವೃದ್ಧಿಗೊಳಿಸುತ್ತಾ ಇನ್ನೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸುವ ಪ್ರಯತ್ನ ನಿರಂತರ ನಡೆದಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಮತ್ತು ಖಾದಿ ಆಯೋಗದಲ್ಲಿ ೨೦೦೯-೧೦ನೇ ಸಾಲಿನ ಬಜೆಟ್ ಸಭೆ ನಡೆಸಲಾಯಿತು. ಅದರಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದ್ದರು. ಟ್ರಸ್ಟಿನ ಅಭಿಮಾನಿಗಳಾದ ಬೆಂಗಳೂರಿನ ಕೆ.ಸುಬ್ಬರಾವ್ ಮತ್ತು ಅವರ ಬಂಧುಗಳು ಪ್ರತಿವರ್ಷದಂತೆ ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ಧನಸಹಾಯ ಮಾಡಿದರು. ಮೈಸೂರಿನ ಶ್ರಿ ಶ್ರೀಧರಮೂರ್ತಿಯವರು ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ಸಂಕ್ರಾಂತಿ ನಿಮಿತ್ತ ಎಳ್ಳು ಬೆಲ್ಲ ಬೀರಿದರು. ಕೆಳೆದ ಎರಡು ವರ್ಷಗಳಿಂದ ಹಿರಿಯ ನಾಗರೀಕರ ಬಳಗವನ್ನು ರಚಿಸಿ ವಯಸ್ಸಾದವರಿಗೆ ಹಲವು ವಿಧವಾಗಿ ಸಹಾಯ ಮಾಡಲಾಗುತ್ತಿದೆ. ಇತ್ತೀಚೆಗೆ ಟ್ರಸ್ಟಿನ ಅಭಿಮಾನಿ ಎಸ್.ಎನ್.ಪ್ರಸಾದ್ ದಂಪತಿಗಳು ಟ್ರಸ್ಟಿಗೆ ಭೇಟಿಕೊಟ್ಟರು. ಆ ಸಂದರ್ಭದಲ್ಲಿ ಅವರು ತಮ್ಮ ತಂದೆಯವರ ನೆನಪಿನಲ್ಲಿ ಹಿರಿಯರ ಸೇವೆಗಾಗಿ ಒಂದು ದತ್ತಿನಿಧಿಯನ್ನು ಸ್ಥಾಪಿಸಿಕೊಟ್ಟರು. ಅದನ್ನು ಸ್ಥಳೀಯ ಬ್ಯಾಂಕಿನಲ್ಲಿ ನಿಗದಿತ ಠೇವಣಿಯಲ್ಲಿ ಇಡಲಾಗಿದೆ. ಅದರಿಂದ ಬರುವ ಆದಾಯವನ್ನು ಹಿರಿಯ ನಾಗರೀಕರಿಕರ ಬಳಗಕ್ಕಾಗಿ ಉಪಯೋಗಿಸಲಾಗುವುದು.

೨೦೦೯ ಜನೆವರಿ ಮಾಹೆಯ ದಾನಿಗಳು

ಶ್ರೀ ಎಸ್.ಎನ್.ಪ್ರಸಾದ್; ಶ್ರೀ ಹರ್ಷ; ಶ್ರೀ ಅನಿಲ್‌ಕುಮಾರ್; ಶ್ರೀ ಎನ್.ಆರ್.ಸುಬ್ರಮಣ್ಯ; ಶ್ರೀಮತಿ ಶರ್ಮಿಳಾ ಅಥಣೀಕರ್; ಶ್ರೀ ರಘುನಂದನ್; ಶ್ರೀ ಎಂ.ಕೆ.ಸುಬ್ಬರಾವ್; ಶ್ರೀಮತಿ ಎಚ್.ಜಿ.ಅಶಾಲತ ಶಿವಪ್ರಸಾದ್; ಶ್ರೀಮತಿ ಆರ್.ವಿನುತಮ್ಮ; ಶ್ರೀ ಎಚ್.ವಿ.ರಾಜೀವ್; ಶ್ರೀ ಪಿ.ಎಸ್.ರಂಗನಾಥ; ಶ್ರೀಮತಿ ವಿಜಯಲಕ್ಷ್ಮಿ; ಶ್ರೀಮತಿ ಶುಭಮತಿ ರಾಜಶೇಖರ್ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೨೫

– ಸುರೇಂದ್ರ ಕೌಲಗಿ



ಟ್ರಸ್ಟಿನ ಸ್ಥಾಪನೆಯಾದದ್ದು ೧೯೬೦ ಆಗಸ್ಟ್‌ನಲ್ಲಿ. ಸಂತೋಷ್‌ರವರ ಜನ್ಮವಾದದ್ದು ೧೯೬೧ ಆಗಸ್ಟ್ ೧೨ ರಂದು. ಆದ್ದರಿಂದ ಸಂತೋಷ್‌ರ ಜೀವನದ ಬೆಳವಣಿಗೆ ಟ್ರಸ್ಟಿನ ಸಾರ್ವಜನಿಕ ಕಾರ್ಯಕ್ರಮದ ಬೆಳವಣಿಗೆ ಮತ್ತು ವಿಸ್ತಾರದೊಂದಿಗೆ ಆಗುತ್ತಾ ಬಂದಿತು. ಕ್ರಮೇಣ ಸಂತೋಷ್‌ರವರ ಬಾಲ್ಯ ಮತ್ತು ಯೌವನ ಟ್ರಸ್ಟಿನ ಕಾರ್ಯ ಚಟುವಟಿಕೆಗಳೊಂದಿಗೆ ಹಾಸು ಹೊಕ್ಕಾಗಿ ಬೆರೆಯಿತು. ಟ್ರಸ್ಟಿನ ಸಾರ್ವಜನಿಕ ಸೇವಾಕಾರ್ಯದ ಸಂಸ್ಕಾರದ ಗಾಢ ಪ್ರಭಾವ ಸಂತೋಷ್‌ರವರ ಮೇಲೆ ಉಂಟಾದುದರಿಂದ ಅವರು ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ಯಾವ ಕೆಲಸವನ್ನು ಬಯಸದೆ ಟ್ರಸ್ಟಿನ ಕೆಲಸವನ್ನೇ ಓರ್ವ ಕಾರ್ಯಕರ್ತರಾಗಿ ಕೆಲಸ ಮಾಡುತ್ತ ಬಂದರು. ಹೀಗೆ ಸಂತೋಷ್‌ರವರ ಜೀವನದ ೨೫ ವರ್ಷಗಳ ಅಮೂಲ್ಯ ಸಮಯ ಮತ್ತು ತಾರುಣ್ಯ ಟ್ರಸ್ಟಿನ ಕೆಲಸಗಳಿಗಾಗಿ ವಿನಿಯೋಗವಾಯಿತು. ಟ್ರಸ್ಟಿನ ಕಾರ್ಯಗಳನ್ನು ನಿರ್ವಹಿಸಲು ಯುವಕರು ಬೇಕೆನ್ನುವ ಅಭಿಪ್ರಾಯ ಟ್ರಸ್ಟಿನ ಧರ್ಮದರ್ಶಿಗಳಲ್ಲಿ ಮೂಡಿತು. ಅದಕ್ಕಾಗಿ ೧೯೯೦ನೇ ಇಸವಿಯಲ್ಲಿ ಟ್ರಸ್ಟಿನ ಸ್ಥಾಪಕ ಧರ್ಮದರ್ಶಿ ಬಿ.ಆರ್.ಪ್ರಾಣೇಶರಾವ್ ಮತ್ತು ಇತರ ಧರ್ಮದರ್ಶಿಗಳ ವಿಶೇಷ ಸಭೆ ಧರ್ಮದರ್ಶಿ ಮಲ್ಲೇಶ್‌ರವರ ಅಧ್ಯಕ್ಷತೆಯಲ್ಲಿ ಕುಕ್ಕರಹಳ್ಳಿ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಆ ಸಭೆಯಲ್ಲಿ ಸಂತೋಷ್‌ರವರನ್ನು ಧರ್ಮದರ್ಶಿಯಾಗಿ ಆಯ್ಕೆ ಮಾಡಿಕೊಳ್ಳಬೇಕೆಂಬ ವಿಷಯದಲ್ಲಿ ಚರ್ಚೆ ನಡೆಯಿತು. ಶ್ರೀ ಜಿ.ರಾಚಪ್ಪ ಮತ್ತು ಸಂತೋಷ್‌ರವರನ್ನು ಖಾಯಂ ಧರ್ಮದರ್ಶಿಗಳನ್ನಾಗಿ ತೆಗೆದುಕೊಳ್ಳಬೇಕೆಂದು ಸೂಚಿಸಿದರು. ಶ್ರೀ ಮಲ್ಲೇಶರವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಈ ರೀತಿ ಹೇಳಿದರು, "ಸಂತೋಷ್ ಕೌಲಗಿಯವರು ಟ್ರಸ್ಟಿನ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವರಲ್ಲದೆ ಅದರ ಅಭಿವೃದ್ಧಿಗಾಗಿ ಎಲ್ಲ ಶ್ರಮವನ್ನು ವಹಿಸುತ್ತಿದ್ದಾರೆ. ಅಲ್ಲದೇ ಹೊಸ ಯುವಕರೂ ಆಗಿದ್ದಾರೆ. ಬಾಲ್ಯದಿಂದಲೂ ರಚನಾತ್ಮಕ ಕಾರ್ಯದ ವಾತಾವರಣದಲ್ಲಿ ಬೆಳೆದು ಬಂದಿದ್ದಾರೆ ಇವೆಲ್ಲವೂ ಸತ್ಯ ಸಂಗತಿಯಾಗಿದ್ದರೂ ಸಹ ಒಂದೇ ಕುಟುಂಬದ ಮೂವರು ಟ್ರಸ್ಟಿನ ಸದಸ್ಯರಾಗಿರುವುದು ಬೇರೆಯವರ ದೃಷ್ಟಿಯಿಂದ ಸರಿಯೇ? ಎಂಬ ಅನಿಸಿಕೆ ನನ್ನದು ಈ ಬಗ್ಗೆ ಸ್ಪಷ್ಟತೆ ಉಂಟಾದಲ್ಲಿ ಒಳ್ಳೆಯದು ವ್ಯಕ್ತಿಶಃ ನನಗೆ ಯಾವ ಅನುಮಾನವಿಲ್ಲ." ಆಗ ಧರ್ಮದರ್ಶಿಯಾಗಿರುವ ಶ್ರೀಮತಿ ಗಿರಿಜಾ ಕೌಲಗಿಯವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು ಸಂತೋಷ್

ಕೌಲಗಿಯವರಿಗೆ ಕೆಲಸ ಮಾಡಲು ಅವಕಾಶ ಮಾಡಿಕೊಡುವುದಾಗಿ ಹೇಳಿದರು ಮತ್ತು ಶ್ರೀ ಸುರೇಂದ್ರ ಕೌಲಗಿಯವರು ಸಹ ತಮ್ಮ ಸ್ಥಾನಕ್ಕೆ ಬೇರೆ ಯಾರನ್ನಾದರೂ ಗೊತ್ತು ಮಾಡಬಹುದೆಂದು ತಿಳಿಸಿದರು. ಸದಸ್ಯರಾದ ಶ್ರೀ ಮಾದೇಗೌಡು ಹಾಗೂ ಶ್ರೀ ಪ್ರಾಣೇಶ್‌ರಾವ್ ಅವರು ಶ್ರೀ ಮಲ್ಲೇಶ್ ಅವರು ಎತ್ತಿದ ಅಭಿಪ್ರಾಯ ಕೆಲ ಹಂತದವರೆಗೆ ಸರಿ ಇದೆಯಾದರೂ ಸಂಸ್ಥೆಯ ಬೆಳವಣಿಗೆಯಲ್ಲಿ ಸಂತೋಷ್ ಅವರು ಬಹಳ ಪ್ರಾಥಮಿಕ ಹಂತದಿಂದ ಕೆಲಸ ಮಾಡಿಕೊಂಡು ಬರುತ್ತಿರುವುದರಿಂದ ಮತ್ತು ಅದಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವುದರಿಂದ ಮತ್ತು ಶ್ರದ್ಧೆಯಿಂದ ಕೆಲಸಮಾಡುತ್ತಿರುವುದರಿಂದ ಮತ್ತು ಮುಂದೆ ಪ್ರತ್ಯಕ್ಷ ಕೆಲಸ ಮಾಡುವ ಕಾರ್ಯಕರ್ತರೇ ಧರ್ಮದರ್ಶಿಗಳಾಗಬೇಕೆಂಬ ನೀತಿಯನ್ನು ನಾವು ರೂಪಿಸಿಕೊಂಡಿರುವುದರಿಂದ ಸಂತೋಷ್ ಅವರನ್ನು ಧರ್ಮದರ್ಶಿಯನ್ನಾಗಿ ತೆಗೆದುಕೊಳ್ಳುವುದರ ಬಗ್ಗೆ ನಮಗೆ ಯಾವ ಹಿಂಜರಿತ ಇರಕೂಡದು ಅದನ್ನು ನಾವು ಸ್ವಾಗತಿಸಬೇಕು ಎಂದು ಅಭಿಪ್ರಾಯಪಟ್ಟರು. ಇದನ್ನು ಶ್ರೀ ಎಸ್.ಪಟ್ಟಾಭಿರಾಮನ್ ಸಹ ಅನುಮೋದಿಸಿದರು. ನಂತರ ಸರ್ವಾನುಮತದಿಂದ ಶ್ರೀ ಜಿ.ರಾಚಪ್ಪ ಮತ್ತು ಶ್ರೀ ಸಂತೋಷ್ ಕೌಲಗಿ ಅವರನ್ನು ಖಾಯಂ ಧರ್ಮದರ್ಶಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಈಗ ಸಂತೋಷ್ ಕೌಲಗಿಯವರು ಟ್ರಸ್ಟಿನ ಪೂರ್ಣ ಸಮಯದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುವುದರಿಂದ ಆವರ ಆಯ್ಕೆ ವಿಷಯ ಸಾರ್ವಜನಿಕವಾಗಿರಲೆಂದು ಈ ಎಲ್ಲ ಮಾತನ್ನು ಹೇಳಬೇಕಾಯಿತು.

(ಮುಂದುವರಿಯುವುದು...)

* * *

ಸನ್ಮಾನ್ಯರಿಂದ...

ಕಳೆದ ಸಂಚಿಕಯಲ್ಲಿ ಪ್ರೊ.ಬಿ.ಕೆ.ಶಿವಣ್ಣನವರ ಪುಸ್ತಕದ ಬಗ್ಗೆ ಬರೆದ ವಿಮರ್ಶೆ ಉತ್ತಮವಾಗಿತ್ತು. ಪ್ರೊ.ಬಿ.ಕೆ.ಶಿವಣ್ಣನವರು ರಾಷ್ಟ್ರೀಯ ಸೇವಾ ಯೋಜನೆಯನ್ನೇ ಉಸಿರಾಡುತ್ತಾರೆ ಎಂಬ ಮಾತು ತಾವು ಅವರ ಸೇವೆಗೆ ಸಲ್ಲಿಸಿದ ನುಡಿ ನಮನದಂತಿದೆ.

– ಜಿ.ಬಿ.ಶಿವರಾಜು, ಬೆಂಗಳೂರು

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ವಿ.ಜಿ.ಜೋಷಿ; ಶ್ರೀ ಜಿ.ಬಿ.ಶಿವರಾಜು;
ಶ್ರೀಮತಿ ಎಂ.ಕೆ.ಪ್ರೇಮಲೀಲಾ; ಶ್ರೀ ಸುರೇಶ್ ಕಲಘಟಗಿ;
ಕರ್ನಾಟಕ ಸರ್ವೋದಯ ಸಂಘ–ಬೆಂಗಳೂರು;
ಶ್ರೀ ಕೆ.ಸುಬ್ಬರಾವ್; ಶ್ರೀ ಎಸ\ ಹಿಎ.ವಿಶ್ವನಾಥ್; ಶ್ರೀ ಎಂ.ಕೆ.ಸುಬ್ಬರಾವ್;
ಶ್ರೀ ಎಂ.ಕೆ.ಶಿವಸ್ವಾಮಿ; ಶ್ರೀ ಎಂ ಕೆ.ಶಂಕರ್; ಶ್ರೀ ಎಂ.ಕೆ.ನಾರಾಯಣ್;
ಶ್ರೀ ಕೆ.ಎಸ್.ಗೋಪಿನಾಥ್ – ಬೆಂಗಳೂರು
ಶ್ರೀ ಕಾಡೇನಹಳ್ಳಿ ನಾಗಣ್ಣಗೌಡ;
ಶ್ರೀ ಹೆಚ್.ಎಲ್.ಕೇಶವಮೂರ್ತಿ–ಮಂಡ್ಯ;
ಶ್ರೀ ಜಿ.ವಿ.ಶಾಸ್ತ್ರಿ–ತುಮಕೂರು;
ಶ್ರೀಮತಿ ಇಂದುಮತಿ–ಚನ್ನೈ; ಡಾ.ಮಂಜುನಾಥ್–ಮೇಲುಕೋಟೆ;
ಶ್ರೀ ಡಿ.ಎಸ್.ನಾಗಭೂಷಣ್–ಶಿವಮೊಗ್ಗ;
ಶ್ರೀ ಧನ್ಯಕುಮಾರ್–ಪಾಂಡವಪುರ;
ಡಾ.ಎಸ್.ಸುಧಾಕರನಾಯಕ್–ಮಣಿಪಾಲ್;
ಶ್ರೀಮತಿ ವಿಜಯಾ–ಮೈಸೂರು;

ಹಾಗೂ ಹೊಸ ಚಂದಾದಾರರು

ಶ್ರೀ ಎಂ.ಕೆ.ಲೋಕೇಶ್–ಕೊಣನೂರು;
ಶ್ರೀ ಆರ್.ಚಂದ್ರಶೇಖರಯ್ಯ; ಶ್ರೀ ಎಸ್.ನಾಗರಾಜು–ಪಾಂಡವಪುರ;
ಶ್ರೀ ಹೆಚ್.ಎಸ್.ನಾಗರಾಜು–ಬೆಂಗಳೂರು;
ಶ್ರೀ ಎಂ.ಕೃಷ್ಣಮೂರ್ತಿ; ಶ್ರೀ ಶಾಮ್.ಎನ್.ಕಶ್ಯಪ್–ಮೈಸೂರು
ಇವರೆಲ್ಲರಿಗೆ ಕೃತಜ್ಞತೆಗಳು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820



ಶ್ರೀಮತಿ/ ಶ್ರೀ................

4) [illegible]
#813, 2ನೇ ಕ್ರಾಸ್
9ನೇ ಮೇನ್ KN ಬಡಾವಣೆ
ಹನುಮಂತನಗರ
ಬೆಂಗಳೂರು 560022

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net